

# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ 24

Read,Share and Follow - www.belagavivaradi.com

Vol-04 | Issue: 250 | ₹ ಬೆಲೆ: 4 | Tuesday, 28, November,2023 | newsbelagavi@gmail.com | 9900332089 | Regn,No:G-2/PMG/KA/NK/BM/139/2021-23


## ಅಕಾಲಿಕ ಮಳೆ ಗುಜರಾತ್ ತತ್ತರ: ಸಿಡಿಲು ಬಡಿದು 20 ಮಂದಿ ಸಾವು



ಅಹಮದಾಬಾದ್: ಅಕಾಲಿಕ ಮಳೆ ಗುಜರಾತ್‌ನ ಹಲವೆಡೆ ಭಾರೀ ಅವಾಂತರ ಸೃಷ್ಟಿಸಿದೆ. ಕಳೆದ ಎರಡು ದಿನದಲ್ಲಿ ಸುರಿದ ಆಲಿಕಲ್ಲು ಮಳೆ ಹಾಗೂ ಸಿಡಿಲು ಬಡಿದು 20 ಮಂದಿ ಸಾವನ್ನಪ್ಪಿದ್ದಾರೆ. ಮಳೆರಾಯನ ಅಬ್ಬರಕ್ಕೆ ಗುಜರಾತ್ ರಾಜ್ಯದಲ್ಲಿ ಜನರು ತತ್ತರಿಸಿ ಹೋಗಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೈಸರ್ಗಿಕ ವಿಕೋಪಕ್ಕೆ ಆತಂಕ ವ್ಯಕ್ತಪಡಿಸಿದ್ದಾರೆ. ಗುಡುಗು ಮತ್ತು ಸಿಡಿಲಿನಿಂದಾಗಿ ಜನರು ಸಾವನ್ನಪ್ಪಿದ ಸುದ್ದಿಯಿಂದ ನಾನು ತೀವ್ರ ದುಃಖಿತನಾಗಿದ್ದೇನೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ತುಂಬಲಾರದ ನಷ್ಟಕ್ಕಾಗಿ ನಾನು ನನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಗಾಯಗೊಂಡವರು ಶೀಘ್ರವೇ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ. ಗುಜರಾತ್‌ನ ಸ್ಥಳೀಯ ಆಡಳಿತವು ಪರಿಹಾರ ಮತ್ತು ರಕ್ಷಣಾ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ ಎಂದು ಭರವಸೆ ನೀಡಿದ್ದಾರೆ.

ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ (ಎಸ್‌ಇಒಸಿ) ಗುಜರಾತ್‌ನ ವಿವಿಧ ಜಿಲ್ಲೆಗಳಿಂದ ಒಟ್ಟು 20 ಮಂದಿ ಸಾವನ್ನಪ್ಪಿದ್ದಾರೆ ಎಂದು ಮಾಹಿತಿ ನೀಡಿದೆ. ದಾಹೋಡ್‌ನಲ್ಲಿ ನಾಲ್ವರು, ಭರೂಚ್‌ನಲ್ಲಿ ಮೂವರು, ತಾಪಿಯಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಅಹಮದಾಬಾದ್, ಅಮ್ರೇಲಿ, ಬನಸ್ಕಾಂತ, ಬೊಟಾಡ್, ಖೇಡಾ, ಮೆಹ್ಸಾನಾ, ಪಂಚಮಹಲ್, ಸಬರ್ಕಾಂತ, ಸೂರತ್, ಸುರೇಂದ್ರನಗರ, ಮತ್ತು ದೇವಭೂಮಿ ದ್ವಾರಕಾದಲ್ಲಿ ತಲಾ ಒಬ್ಬರು ಪ್ರಾಣ ಬಿಟ್ಟಿದ್ದಾರೆ ಎನ್ನಲಾಗಿದೆ.

# ಇದು ಜನತಾ ದರ್ಶನ ಅಲ್ಲ, ಜನಸ್ಪಂದನ ಎಂದ ಸಿಎಂ

## ಅರ್ಜಿಗಳ ಇತ್ಯರ್ಥಕ್ಕೆ 15 ದಿನ ಗಡುವು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ತಮ್ಮ ಗೃಹ ಕಚೇರಿ ಕೃಷ್ಣದಲ್ಲಿ ಸತತ ಏಳು ಗಂಟೆಗಳ ಕಾಲ ಜನತಾದರ್ಶನ ನಡೆಸಿ, ಜನರ ಸಮಸ್ಯೆಗಳನ್ನು ಆಲಿಸಿದರು. ಇಡೀ ದಿನ ನಡೆದ ಈ ಕಾರ್ಯಕ್ರಮದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು, ಇವುಗಳ ಇತ್ಯರ್ಥಕ್ಕೆ ಸಿಎಂ ಸಿದ್ದರಾಮಯ್ಯ ಅವರು 15 ದಿನ ಗಡುವು ನೀಡಿದ್ದಾರೆ.

ಜನಸ್ಪಂದನ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಇದು ಜನತಾ ದರ್ಶನ ಅಲ್ಲ. ಜನಸ್ಪಂದನ ಕಾರ್ಯಕ್ರಮ. ಇಂದು 3,500 ಅರ್ಜಿಗಳು ಬಂದಿವೆ. ಇನ್ನೂ ಜನರು ಬರುತ್ತಿದ್ದಾರೆ. ಎಲ್ಲಾ ಅರ್ಜಿಗಳನ್ನು ಸ್ವೀಕರಿಸಿ ತಕ್ಷಣ ಪರಿಹಾರ ಕೊಡಬೇಕು. ಮುಂದಿನ 15 ದಿನಗಳಲ್ಲಿ ಈ ಎಲ್ಲಾ ಅರ್ಜಿಗಳ ಇತ್ಯರ್ಥ ಆಗಬೇಕು. ಮತ್ತೆ ಜನಸ್ಪಂದನ ಮಾಡಿದಾಗ ಇಷ್ಟು ಅರ್ಜಿ ಬರಬಾರದು ಎಂದರು.

ನಾನು ಬೆಳಗ್ಗೆಯಿಂದಲೇ ಜನರ ಬಳಿಗೆ ತೆರಳಿ ಅವರ ಕುಂದುಕೊರತೆಗಳನ್ನು ಖುದ್ದು ಆಲಿಸಿದ್ದೇನೆ. ಸ್ವೀಕೃತವಾಗಿರುವ ಎಲ್ಲ ಅರ್ಜಿಗಳ ಬಗ್ಗೆ ಕಾನೂನು ರೀತ್ಯ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು.

ಇಂದಿನ ಜನಸ್ಪಂದನಕ್ಕೆ ಉದ್ಯೋಗ ಬೇಡಿಕೆಯೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಕಲಚೇತನರು ಆಗಮಿಸಿದ್ದು,



ಸಾಧ್ಯವಾದ ಕಡೆಗಳಲ್ಲಿ ಉದ್ಯೋಗ ಹಾಗೂ ಮಾಸಾಶನ ಒದಗಿಸಲು ಸೂಚನೆ ನೀಡಲಾಗಿದೆ. ಜಿಲ್ಲಾ ಮಂತ್ರಿಗಳು, ಜಿಲ್ಲಾಧಿಕಾರಿಗಳು ಸ್ಥಳೀಯವಾಗಿ ಜನರ ಸಮಸ್ಯೆ ಬಗೆಹರಿಸಬೇಕೆಂದು ಸೂಚನೆ ನೀಡಲಾಗಿದೆ. ಮೂರು ತಿಂಗಳ ನಂತರ ಮತ್ತೊಮ್ಮೆ ಜನಸ್ಪಂದನ ನಡೆಸಲಾಗುವುದು. ಆಗ ಈ ಪ್ರಮಾಣದಲ್ಲಿ ಜನರು ತಮ್ಮ ಸಮಸ್ಯೆಗಳೊಂದಿಗೆ ಬರದಂತೆ ಜಿಲ್ಲಾಧಿಕಾರಿಗಳು ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ನೋಡಿಕೊಳ್ಳಬೇಕು ಎಂಬ ಎಚ್ಚರಿಕೆಯನ್ನು ನೀಡಲಾಗಿದೆ ಎಂದರು.

ಕ್ಯಾನ್ಸರ್, ಕಿಡ್ನಿ, ಹೃದಯ ಸಂಬಂಧಿ ಸಮಸ್ಯೆ ಸೇರಿದಂತೆ ಆರೋಗ್ಯ ಸಮಸ್ಯೆಯಿಂದಾಗಿ ವೈದ್ಯಕೀಯ ವೆಚ್ಚ ಭರಿಸುವ ಮನವಿಗಳು ಹೆಚ್ಚು ಸ್ವೀಕೃತವಾಗಿವೆ. ನಾನು ಮುಖ್ಯಮಂತ್ರಿಯಾದ ನಂತರ ಜನರ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕಾಗಿ ಸುಮಾರು 25 ಕೋಟಿ ರೂ.ಗಳನ್ನು ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಉತ್ತಮ ಚಿಕಿತ್ಸೆ ಲಭಿಸುತ್ತದೆ ಎಂಬ ನಂಬಿಕೆಯಿಂದ ಜನರು ಸರ್ಕಾರಿ ಆಸ್ಪತ್ರೆ ಬಿಟ್ಟು, ಖಾಸಗಿ ಆಸ್ಪತ್ರೆಯತ್ತ ಮುಖ ಮಾಡುವ ಕಾರಣ, ಅವರ ವೈದ್ಯಕೀಯ ವೆಚ್ಚಗಳೂ ಹೆಚ್ಚಾಗುತ್ತವೆ. ಆ ವೆಚ್ಚದಲ್ಲಿ ಸಣ್ಣಪ್ರಮಾಣವನ್ನು ಸರ್ಕಾರ ಈ ರೀತಿ ಭರಿಸಲು ಪ್ರಯತ್ನಿಸುತ್ತಿದೆ ಎಂದು ಸಿಎಂ ಹೇಳಿದ್ದಾರೆ.

ಅಧಿಕಾರಿಗಳು ಜನರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಬೇಕು. ಸಮಸ್ಯೆ ಬಗೆಹರಿಸದೆ ಇದ್ದರೆ ದೊಡ್ಡದಾಗುತ್ತಲೇ ಹೋಗುತ್ತದೆ. ಬಹುತೇಕ ಸಮಸ್ಯೆಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿದೆ. ಅನೇಕ ಜನರು ಕೆಲಸ ಕೊಡಿಸಿ ಅಂತಾ ಕೇಳಿದ್ದಾರೆ. ವಿಕಲಚೇತನರಿಗೆ 4 ಸಾವಿರ ತ್ರಿಚಕ್ರ ವಾಹನ ನೀಡಲು ಸೂಚಿಸಿದ್ದೇನೆ ಎಂದರು.

ಏತನ್ಮಧ್ಯೆ, ಜನತಾ ದರ್ಶನವನ್ನು ಬೋಗಸ್ ಎಂದು ಪ್ರತಿಪಕ್ಷ ಬಿಜೆಪಿ ಟೀಕಿಸಿದ್ದು, ಅವರೊಬ್ಬರೇ (ಸಿದ್ದರಾಮಯ್ಯ) ಜನತಾ ದರ್ಶನ ನಡೆಸಿದರೆ ಏನೂ ಆಗುವುದಿಲ್ಲ ಎಂದು ಹೇಳಿದೆ.

ಸಿದ್ದರಾಮಯ್ಯ ಅವರು ಜನತಾದರ್ಶನ ನಡೆಸುವ ಮೊದಲು ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಸಾರ್ವಜನಿಕರಿಗೆ ದರ್ಶನ ಮಾಡಿಸಲಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ವ್ಯಂಗ್ಯವಾಡಿದ್ದಾರೆ.



## ಇಂದು ನಿಗಮ ಮಂಡಳಿ ಪಟ್ಟಿ ಫೈನಲ್ ಸಾಧ್ಯತೆ

ಬೆಂಗಳೂರು: ನಿಗಮ-ಮಂಡಳಿ ಪಟ್ಟಿ ಫೈನಲ್ ಮಾಡುವ ಸಂಬಂಧ ಮಂಗಳವಾರ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ.

ಮಧ್ಯಾಹ್ನ 12:20 ಕ್ಕೆ ಬೆಂಗಳೂರಿಗೆ ಆಗಮಿಸಲಿದ್ದು, ಮಧ್ಯಾಹ್ನ 2 ಗಂಟೆಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಜೊತೆ ನಿಗಮ-ಮಂಡಳಿ ಕುರಿತು ಸಭೆ ನಡೆಸಲಿದ್ದಾರೆ. ಬಹುತೇಕ ಇಂದು ನಿಗಮ-ಮಂಡಳಿ ಪಟ್ಟಿ ಫೈನಲ್ ಆಗುವ ಸಾಧ್ಯತೆ ಇದೆ.

ಈಗಾಗಲೇ ಮೊದಲ ಹಂತದ ಸಭೆಯನ್ನು ಸಿಎಂ, ಡಿಸಿಎಂ, ಸುರ್ಜೇವಾಲಾ ನಡೆಸಿದ್ದಾರೆ. ನಾಳೆ ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದು, ಶಾಸಕರಿಗೆ ಮೊದಲ ಪಟ್ಟಿಯಲ್ಲಿ ಅವಕಾಶ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಶಾಸಕರ ಜೊತೆ ಕಾರ್ಯಕರ್ತರಿಗೂ ನೀಡುವ ಬಗ್ಗೆ ಚರ್ಚೆ ಆಗಲಿದೆ. ಶಾಸಕರಿಗೆ ಮಾತ್ರ ಮೊದಲ ಪಟ್ಟಿಯಲ್ಲಿ ಕೊಡಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳುತ್ತಿದ್ದರೆ ಕಾರ್ಯಕರ್ತರಿಗೂ ಮೊದಲ ಪಟ್ಟಿಯಲ್ಲಿ ಸ್ಥಾನ ಕೊಡಲು ಡಿಕೆ ಶಿವಕುಮಾರ್ ಬೇಡಿಕೆ ಇಟ್ಟಿದ್ದಾರೆ. ಹೀಗಾಗಿ ಇಂದು ಮಹತ್ವದ ಸಭೆ ನಡೆಯಲಿದ್ದು,ಯಾರು ಯಾರಿಗೆ ನಿಗಮ-ಮಂಡಳಿ ಎನ್ನುವುದು ಬಹುತೇಕ ಫೈನಲ್ ಆಗುವ ಸಾಧ್ಯತೆಯಿದೆ.

## ಬಡ್ಡಿ ದಂಧೆಗೆ ಕಡಿವಾಣ ಹಾಕಲು ಕ್ರಮ: ಗೃಹ ಸಚಿವ ಪರಮೇಶ್ವರ್

ತುಮಕೂರು: ಬಡ್ಡಿದಂಧೆ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದು, ಇಂತಹ ವ್ಯವಹಾರಕ್ಕೆ ಕಡಿವಾಣ ಹಾಕಲು ಎಸ್ಪಿಗೆ ಸೂಚಿಸಿರುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದರು. ಸದಾಶಿವನಗರದಲ್ಲಿ ಮೂವರು ಮಕ್ಕಳನ್ನು ಸಾಯಿಸಿ ದಂಪತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಂಬಂಧ ಇಂದು ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಐದು ಮಂದಿಯ ಸಾವಿನ ಬಗ್ಗೆ ಮಾಹಿತಿ ಪಡೆದುಕೊಂಡರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕಡಿಮೆ ಹಣಕ್ಕೆ ಐದು ಮಂದಿ ಸಾಯೋದು ಸಾಮಾನ್ಯ ವಿಷಯವಲ್ಲ. ಅಮಾಯಕರಿಗೆ ಸಾಲಕೊಟ್ಟು ಹೆಚ್ಚಿನ ಬಡ್ಡಿ ವಸೂಲಿ ಮಾಡುವುದಲ್ಲದೆ, ಕಿರುಕುಳ ನೀಡಿ ಅವರನ್ನು



ನೋಯಿಸಿರುವುದು ಬೇಸರದ ಸಂಗತಿ ಎಂದರು. ಮುಂದೆ ಇಂತಹ ಘಟನೆಗಳು ಮರುಕಳಿಸಬಾರದು, ಐದು ಮಂದಿ ಸಾವಿಗೆ ಕಾರಣರಾದವರಿಗೆ ತಕ್ಕ ಶಿಕ್ಷೆಯಾಗಬೇಕು, ಮೀಟರ್ ಬಡ್ಡಿ ದಂಧೆಗೆ ಕಡಿವಾಣಹಾಕಬೇಕು ಎಂದರು.

ಎರಡು ಎಫ್‌ಐಆರ್ ದಾಖಲು: ಮೃತ ಗರೀಬ್ಸಾಬ್ ಅವರ ಸಹೋದರ ನೀಡಿದ ದೂರಿನ ಮೇರೆಗೆ ತಿಲಕ್‌ಪಾರ್ಕ್ ಠಾಣೆ ಪೊಲೀಸರು ಎರಡು ಪ್ರಕರಣ ದಾಖಲಿಸಿದ್ದಾರೆ. ಮೊದಲ ಎಫ್‌ಐಆರ್‌ನಲ್ಲಿ ಆತ್ಮಹತ್ಯೆ ಪ್ರಕರಣ ದಾಖಲಾದರೆ, ಎರಡನೇ ಎಫ್‌ಐಆರ್‌ನಲ್ಲಿ ಬಡ್ಡಿ ದಂಧೆ, ಕಿರುಕುಳ ಪ್ರಕರಣ ದಾಖಲಾಗಿದೆ.

ಗರೀಬ್ಸಾಬ್ ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸ ಹಾಗೂ ತನ್ನ ವ್ಯವಹಾರಕ್ಕಾಗಿ ನೆರೆಮನೆ ನಿವಾಸಿ ಕಲಂದರ್ ಹಾಗೂ ಇತರರು ನನಗೆ ಸಾಲ ಕೊಡಿಸಿ ಮೀಟರ್ ಬಡ್ಡಿ ವಸೂಲಿ ಮಾಡಿ ಕಿರುಕುಳ ನೀಡಿದ್ದಾರೆಂದು ಡೆತ್‌ನೋಟ್‌ನಲ್ಲಿ ಬರೆಯಲಾಗಿದೆ.

## ಗಾಜಾ ಪಟ್ಟಿ: 45 ದಿನಗಳಲ್ಲಿ ಇಸ್ರೇಲ್ ಸೇನೆಯಿಂದ 50 ಮಂದಿ ಪತ್ರಕರ್ತರ ಹತ್ಯೆ

ಹಮಾಸ್- ಇಸ್ರೇಲ್ ಸಂಘರ್ಷದ ಆರಂಭದಿಂದ ಈ ವರೆಗೂ ಕನಿಷ್ಟ 70 ಮಂದಿ ಪತ್ರಕರ್ತರು ಅಥವಾ ಮಾಧ್ಯಮ ಉದ್ಯೋಗಿಗಳು ಹತ್ಯೆಯಾಗಿದ್ದಾರೆ. ಹಲವರು ಕಣ್ಮರೆಯಾಗಿದ್ದಾರೆ ಎಂದು ಪ್ಯಾಲೆಸ್ತೇನ್ ಪತ್ರಕರ್ತರ ಸಿಂಡಿಕೇಟ್ ನ ಡೇಟಾ ಹೇಳಿದೆ.

ಆರ್‌ಎಸ್‌ಎಫ್ ನ ಮಾಹಿತಿಯ ಪ್ರಕಾರ ಗಾಜಾದಲ್ಲಿ ಪತ್ರಿಕೋದ್ಯಮವನ್ನು ನಿರ್ನಾಮ ಮಾಡುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದೆ.

ಕಳೆದ 3 ದಿನಗಳಲ್ಲಿ ಪ್ಯಾಲೆಸ್ತೇನ್ ನ 10 ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದು, ಅ.07 ರಿಂದ ನ.22 ವರೆಗೆ ಹತ್ಯೆಗೀಡಾದ ಮಾಧ್ಯಮದವರ ಸಂಖ್ಯೆ 48ಕ್ಕೆ ಏರಿಕೆಯಾಗಿದೆ ಎಂದು ಆರ್‌ಎಸ್‌ಎಫ್ ಎಕ್ಸ್ ನಲ್ಲಿ ತಿಳಿಸಿದೆ.

ಆರ್‌ಎಸ್‌ಎಫ್ ನ ಮಧ್ಯಪ್ರಾಚ್ಯ ಡೆಸ್ಕ್‌ನ



ಮುಖ್ಯಸ್ಥ ಜೊನಾಥನ್ ಡಾಘರ್ ಪ್ರಕಾರ, "ಇಸ್ರೇಲಿ ಪಡೆಗಳು ಗಾಜಾ ಪಟ್ಟಿಯಲ್ಲಿ 45 ದಿನಗಳಲ್ಲಿ ಸುಮಾರು 50 ಪತ್ರಕರ್ತರನ್ನು ಕೊಂದಿವೆ, ಕಾರ್ಯನಿರತರಾಗಿದ್ದಾಗ 11 ಮಂದಿ ಸಾವನ್ನಪ್ಪಿದ್ದಾರೆ. ಇದು ಶತಮಾನದಲ್ಲೇ ಅತ್ಯಂತ ಭೀಕರ ಹತ್ಯೆಗಳಲ್ಲಿ ಒಂದಾಗಿದೆ. ಅಂತರಾಷ್ಟ್ರೀಯ ಪತ್ರಕರ್ತರು ಗಾಜಾಕ್ಕೆ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. ವರದಿಗಾರರಿಗೆ ಸುರಕ್ಷಿತ ಆಶ್ರಯವಿಲ್ಲ. ಒಬ್ಬರ ನಂತರ ಒಬ್ಬರು ಕೊಲ್ಲಲ್ಪಡುತ್ತಿದ್ದಾರೆ. ಅಕ್ಟೋಬರ್ 7 ರಿಂದ, ಪ್ಯಾಲೇಸ್ಟಿನಿಯನ್ ಪ್ರದೇಶವು ಪತ್ರಿಕೋದ್ಯಮದ ನಿಜವಾದ ನಿರ್ಮೂಲನೆಗೆ ಒಳಪಟ್ಟಿದೆ.

"ಅಲ್ಲಿನ ಪತ್ರಕರ್ತರನ್ನು ರಕ್ಷಿಸಲು, ರಫಾ ಗಡಿ ದಾಟುವಿಕೆಯನ್ನು ತೆರೆಯಲು ಮತ್ತು ಅಂತರರಾಷ್ಟ್ರೀಯ ವರದಿಗಾರರು ಒಳಗೆ ಹೋಗಲು ಮಧ್ಯಪ್ರವೇಶಿಸುವಂತೆ ನಾವು ಅಂತರರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸುತ್ತೇವೆ" ಎಂದು ಅವರು ಹೇಳಿದರು.

## ಅಕ್ರಮ ಮರಳು ಸಾಗಾಟ ತಡೆಯಲು ಹೋದ ಅಧಿಕಾರಿಯನ್ನು ಟ್ರ್ಯಕ್ಟರ್ ಹರಿಸಿ ಹತ್ಯೆ

ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಟ್ರ್ಯಕ್ಟರ್ ತಡೆಯಲು ಹೋದ ಕಂದಾಯ ಇಲಾಖೆಯ ಅಧಿಕಾರಿ ಮೇಲೆ ಟ್ರ್ಯಕ್ಟರ್ ಹರಿಸಿ ಕೊಲೆ ಮಾಡಲಾಗಿದೆ. ಇನ್ನೂ ಗೋಪಾಲ್‌ಪುರ ಪ್ರದೇಶದ ಸೋನ್ ನದಿಯ ಸಮೀಪ ಈ ಘಟನೆ ನಡೆದಿದೆ ಎಂದು ವರದಿಯಿಂದ ತಿಳಿದುಬಂದಿದೆ.

ಹತ್ಯೆಗೀಡಾದ ಅಧಿಕಾರಿ ಪ್ರಸನ್ನ ಸಿಂಗ್ (45) ಎಂದು ವರದಿಯಾಗಿದೆ.

ಹತ್ಯೆಗೀಡಾದ ಪ್ರಸನ್ನ ಸಿಂಗ್ ಬೋಹಾರಿ ತಹಸೀಲ್‌ನ ಖಡ್ಡಾ ಗ್ರಾಮದಲ್ಲಿ ಪಟ್ವಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮೈಹಾರ್ ಜಿಲ್ಲೆಯ ನಿವಾಸಿ, ಶುಭಂ ವಿಶ್ವಕರ್ಮ (25) ಎಂಬಾತ ಟ್ರ್ಯಕ್ಟರ್ ಹರಿಸಿ ಕೊಲೆ ಮಾಡಿದ ಆರೋಪಿಯಾಗಿದ್ದು, ಪೊಲೀಸರು ಕಾರ್ಯಾಚರಣೆ ನಡೆಸಿ ಆತನನ್ನು ಅರೆಸ್ಟ್ ಮಾಡಿದ್ದಾರೆ.

ಅಧಿಕಾರಿ ಪ್ರಸನ್ನ ಸಿಂಗ್ ಸೇರಿದಂತೆ ಸರ್ಕಾರಿ ನೌಕರರ ಗಸ್ತು ತಂಡವು ಅಕ್ರಮವಾಗಿ ಗಣಿಗಾರಿಕೆ ಮಾಡಿದ ಮರಳನ್ನು ಸಾಗಿಸುತ್ತಿದ್ದ ಟ್ರ್ಯಕ್ಟರ್ ತಡೆದಿದ್ದರು. ಈ ವೇಳೆ, ಚಾಲಕ ಅಧಿಕಾರಿ ಮೇಲೆಯೇ ಟ್ರಾಕ್ಟರ್ ಓಡಿಸಿದ್ದಾನೆ. ಪರಿಣಾಮ ಅಧಿಕಾರಿ ಸಿಂಗ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.



ಕೂಡಲೇ ಆರೋಪಿ ಚಾಲಕ ಟ್ರ್ಯಕ್ಟರ್ ಮತ್ತು ಟ್ರಾಲಿ ಸಮೇತ ಸ್ಥಳದಿಂದ ಎಸ್ಕೇಪ್ ಆಗಿದ್ದಾನೆ ಎಂದು ಡಿಯೋಲಂಡ್ ಪೊಲೀಸ್ ಠಾಣೆಯ ಉಸ್ತುವಾರಿ ರಾಜ್‌ಕುಮಾರ್ ಮಿಶ್ರಾ ತಿಳಿಸಿದ್ದಾರೆ.

ಇನ್ನೂ ಟ್ರಾಕ್ಟರ್ ಚಾಲಕ ಶುಭಂ ವಿಶ್ವಕರ್ಮನನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ ಕೃತ್ಯಕ್ಕೆ ಬಳಸಿದ ಟ್ರ್ಯಕ್ಟರ್ ವಶಪಡಿಸಿಕೊಳ್ಳಲಾಗಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 302ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಶಹದೋಲ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಪ್ರತೀಕ್ ತಿಳಿಸಿದ್ದಾರೆ ಎಂದು ವರದಿ ತಿಳಿಸಿದೆ.

## ಪ್ರತಿ ಮಾದಕವಸ್ತು ಕಳ್ಳಸಾಗಣೆ ಪ್ರಕರಣದಲ್ಲಿ ಕನಿಷ್ಠ 10 ವ್ಯಕ್ತಿಗಳನ್ನು ಬಂಧಿಸಿ: ಅಬ್ದುಲ್ ಅಜೀಂ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡುತ್ತಿರುವ ಮಾದಕವಸ್ತು ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ನಿಟ್ಟಿನಲ್ಲಿ ಪ್ರತಿ ಮಾದಕವಸ್ತು ದಂಧೆ ಪ್ರಕರಣದಲ್ಲಿ ಕನಿಷ್ಠ 10 ಮಂದಿಯನ್ನು ಬಂಧಿಸುವಂತೆ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ ಪೊಲೀಸ್ ಇಲಾಖೆಗೆ ಸಲಹೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಜೀಂ, ಸಾಮಾನ್ಯವಾಗಿ ಪೊಲೀಸರು ಎಫ್‌ಐಆರ್ ದಾಖಲಿಸುವುದು ಮಾದಕವಸ್ತು ದಂಧೆಕೋರರ ಮೇಲೆಯೇ ಹೊರತು ಸಂಚುಕೋರರು ಮತ್ತು ಅಪರಾಧಕ್ಕೆ ಕುಮ್ಮಕ್ಕು ನೀಡಿದವರ ಮೇಲಲ್ಲ. ಹೀಗಾಗಿ ಪೊಲೀಸರು ಆರೋಪಿಯ ಪೋಷಕರು, ಸಂಗಾತಿಗಳು ಮತ್ತು ಇತರ ನಿಕಟ ಸಂಬಂಧಿಗಳನ್ನು ಸೇರಿಸಿಕೊಳ್ಳಬೇಕು ಎಂದು ಅವರು ಹೇಳಿದರು. ಆರೋಪಿಗಳ ಪೋಷಕರು ಮತ್ತು ಸಂಗಾತಿಯನ್ನು ಬಂಧಿಸಿದರೆ, ಅದು ನಿರೀಕ್ಷಿತ ಅಪರಾಧಿಗಳಿಗೆ ಎಚ್ಚರಿಕೆ ಗಂಟೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಅವರು ಹೇಳಿದರು.




ಮಾಜಿ ಪೊಲೀಸ್ ಅಧಿಕಾರಿಯೂ ಆಗಿರುವ ಅಜೀಂ, ನಕಲಿ ಶ್ಯೂರಿಟಿ ಪ್ರಕರಣಗಳು ಹೆಚ್ಚುತ್ತಿವೆ.

ಹೀಗಾಗಿ ಅಪರಾಧಿಗಳಿಗೆ ನೀಡಿರುವ ಜಾಮೀನು ಶ್ಯೂರಿಟಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳ ಮೂಲಕ ಪರಿಶೀಲಿಸುವಂತೆ ಪೊಲೀಸ್ ಇಲಾಖೆಗೆ ಸಲಹೆ ನೀಡಿದರು. ಜಿಲ್ಲೆಯ ಬಹುತೇಕ ಮಾದಕವಸ್ತು ದಂಧೆಕೋರರು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಅಧ್ಯಕ್ಷರಿಗೆ ತಿಳಿಸಿದರು.

## ಸಿಎಂ ಅಪರ ಮುಖ್ಯ ಕಾರ್ಯದರ್ಶಿಯಾಗಿ ಹಿರಿಯ ಐಎಎಸ್ ಅಧಿಕಾರಿ ಎಲ್.ಕೆ ಅತೀಕ್ ನೇಮಕ



ಬೆಂಗಳೂರು: ಮುಖ್ಯಮಂತ್ರಿಗಳ ಅಪರ ಮುಖ್ಯಕಾರ್ಯದರ್ಶಿಯಾಗಿ ಹಿರಿಯ ಐಎಎಸ್ ಅಧಿಕಾರಿ ಎಲ್.ಕೆ.ಅತೀಕ್ ಅವರನ್ನು ನೇಮಕ ಮಾಡಲಾಗಿದೆ.

ಈವರೆಗೂ ಹಣಕಾಸು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅತೀಕ್ ಅವರು ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ ಜತೆಗೆ ಹಣಕಾಸು ಇಲಾಖೆಯ ಹುದ್ದೆಯಲ್ಲೂ ಮುಂದುವರಿಯಲಿದ್ದಾರೆ.

ಮುಖ್ಯಮಂತ್ರಿಗಳ ಅಪರ ಮುಖ್ಯಕಾರ್ಯರ್ಶಿಯಾಗಿದ್ದ ರಜನೀಶ್ ಗೋಯಲ್ ಅವರನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ನೇಮಿಸಿದೆ.

ನವೆಂಬರ್ 30ರಂದು ಮುಖ್ಯ ಕಾರ್ಯದರ್ಶಿಯಾಗಿ ರಜನೀಶ್ ಗೋಯಲ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಲುತಾಫುಲ್ಲಾ ಖಾನ್ ಅವರು ತುಮಕೂರು ಜಿಲ್ಲೆ ಪಾವಗಡದವರು. 1991ನೇ ಬ್ಯಾಚ್‌ನ ಐಎಎಸ್ ಅಧಿಕಾರಿ.

ಮಂಗಳೂರು ಎಸಿಯಾಗಿ ನಂತರ ಮಂಡ್ಯ, ಹಾಸನ ಡಿಸಿಯಾಗಿದ್ದವರು. ಸರ್ವ ಶಿಕ್ಷಾ ಅಭಿಯಾನದ ಯೋಜನಾ ನಿರ್ದೇಶಕರೂ ಆಗಿದ್ದರು.

ಕೇಂದ್ರ ಸರ್ಕಾರದ ಸೇವೆಯಲ್ಲಿ ಪ್ರಧಾನ ಮಂತ್ರಿಗಳ ಕಚೇರಿಯಲ್ಲಿಯೂ ಸೇವೆ ಸಲ್ಲಿಸಿದರು. ವಿಶ್ವ ಬ್ಯಾಂಕ್ ಕಾರ್ಯ ನಿರ್ವಾಹಕ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ ಅನುಭವವಿದೆ. ಕರ್ನಾಟಕದಲ್ಲಿ ಪಂಚಾಯತ್ ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಯೂ ಸೇರಿ ಹಲವು ಇಲಾಖೆಗಳಲ್ಲಿ ಕೆಲಸ ಮಾಡಿದ್ದಾರೆ. 2025ರ ಜನವರಿಯಲ್ಲಿ ನಿವೃತ್ತರಾಗಲಿದ್ದಾರೆ.

## ಶಾಲೆ ಸ್ಥಳಾಂತರಕ್ಕೆ ಬಿಬಿಎಂಪಿ ವಿಳಂಬ;

### ಕುಸಿದೇ ಬಿತ್ತು ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡ; ತಪ್ಪಿದ ಭಾರಿ ಅನಾಹುತ!



ಬೆಂಗಳೂರು: ಶಿವಾಜಿನಗರದ ತಿಮ್ಮಯ್ಯ ಬಿ ಕ್ರಾಸ್ ರೋಡ್ ನಲ್ಲಿ ಶಿಥಿಲಾವಸ್ಥೆಯಲ್ಲಿದ್ದ ನರ್ಸರಿ ಶಾಲಾ ಕಟ್ಟಡದಿಂದ ಸುರಕ್ಷಿತ ಸ್ಥಳಕ್ಕೆ ಶಾಲೆಯನ್ನು ಸ್ಥಳಾಂತರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವಿಳಂಬ ಮಾಡಿದ್ದು, ಕೊನೆಗೆ ಸೋಮವಾರ ಬೆಳಗಿನ ಜಾವ 2 ಗಂಟೆಗೆ ಸುಮಾರಿಗೆ ಆ ಕಟ್ಟ ಕುಸಿದುಕೊಂಡೇ ಬಿದ್ದಿದೆ. ಪರಿಣಾಮ ಒಂದು ಸ್ಯಾಂಟ್ರೋ ಕಾರು, ಒಂದು ಲಗೇಜ್ ಆಟೋ ಹಾಗೂ ಒಂದು ಸ್ಕೂಟರ್ ಸಂಪೂರ್ಣ ಜಖಂಗೊಂಡಿದೆ.

ರಾತ್ರಿ ವೇಳೆ ಈ ಘಟನೆ ಸಂಭವಿಸಿದ್ದರಿಂದ ಇಬ್ಬರು ಶಿಕ್ಷಕರು, ಒಬ್ಬ ಸೆಕ್ಯುರಿಟಿ ಹಾಗೂ 80 ಮಕ್ಕಳು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ.

ಘಟನೆ ಬಳಿಕ ಬಿಬಿಎಂಪಿ, ಸ್ಥಳೀಯ ಪೊಲೀಸರ ತಂಡ ಸ್ಥಳಕ್ಕೆ ದೌಡಾಯಿಸಿದ್ದು, ಬಿಬಿಎಂಪಿ ಶಿವಾಜಿನಗರ ವಾರ್ಡ್ ಸಹಾಯಕ ಎಂಜಿನಿಯರ್ ರಾಘವೇಂದ್ರ ಅವರು ಜೆಸಿಬಿ ಯಂತ್ರದ ಸಹಾಯ ಪಡೆದು ಅವಶೇಷಗಳನ್ನು ತೆರವುಗೊಳಿಸುವಂತೆ ಸೂಚಿಸಿದ್ದಾರೆ.

ಮಾತನಾಡಿದ ಶಾಸಕ ರಿಜ್ವಾನ್ ಅರ್ಷದ್, ಶಿವಾಜಿನಗರದ ಬಹುತೇಕ ಸಾರ್ವಜನಿಕ ಕಟ್ಟಡಗಳು 50 ವರ್ಷಕ್ಕಿಂತ ಹಳೆಯದಾಗಿದ್ದು, ಕನಿಷ್ಠ 15 ವರ್ಷಗಳ ಹಿಂದೆ ಪುನಃಸ್ಥಾಪನೆ ಕಾರ್ಯವನ್ನು ಕೈಗೊಳ್ಳಬೇಕಾಗಿತ್ತು. "ಶಾಲೆಗಳು, ಸಮುದಾಯ ಭವನ ಮತ್ತು ಸಾರ್ವಜನಿಕ ಗ್ರಂಥಾಲಯದಂತಹ 20 ಸಾರ್ವಜನಿಕ ಕಟ್ಟಡಗಳು ಅತ್ಯಂತ ಹಳೆಯದಾಗಿದೆ. ಈ ಕಟ್ಟಡಗಳನ್ನು ತೆರವುಗೊಳಿಸಿ, ಹೊಸ ಕಟ್ಟಡ ನಿರ್ಮಾಣಕ್ಕೆ ದಾರಿ ಮಾಡಿಕೊಡಬೇಕಾಗಿದೆ. ನಾನು 7 ಶಾಲೆಗಳು, 3 ಸಮುದಾಯ ಭವನ ಮತ್ತು 3 ಗ್ರಂಥಾಲಯ ಹಾಗೂ ಬಿಬಿಎಂಪಿ ಇಂಗ್ಲಿಷ್ ನರ್ಸರಿ ಶಾಲೆಯನ್ನು ಹೊಸದಾಗಿ ನಿರ್ಮಾಣ ಮಾಡಲು ಪ್ರಾರಂಭಿಸಿದ್ದೇವೆ. ಕುಸಿದು ಬಿದ್ದಿರುವ ಕಟ್ಟಡ ಸಹ ಆ ಪಟ್ಟಿಯಲ್ಲಿದೆ. ಕೆಲವು ತಿಂಗಳ ಹಿಂದೆ ನಾನು ಸ್ಥಳಕ್ಕೆ ಭೇಟಿ ನೀಡಿದ್ದೆ ಮತ್ತು ಹೊಸ ಕಟ್ಟಡ ನಿರ್ಮಿಸಲು, ಆ ಶಾಲೆಯನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸುವಂತೆ ಸೂಚಿಸಿದ್ದೆ ಎಂದು ಹೇಳಿದ್ದಾರೆ.

ಶಾಲೆಯನ್ನು ಸ್ಥಳಾಂತರ ಮಾಡುವಲ್ಲಿ ಬಿಬಿಎಂಪಿ ವಿಳಂಬ ಧೋರಣೆ ಅನುಸರಿಸಿದ ಬೆನ್ನಲ್ಲೇ ನೆಲ ಹಾಗೂ ಒಂದು ಮಹಡಿ ಕಟ್ಟಡ ಕುಸಿದು ಬಿದ್ದಿದೆ ಎಂದು ಸ್ಥಳೀಯ ಮುಖಂಡ ಸೈಯದ್ ಸುಜಾದ್ದೀನ್ ಆರೋಪಿಸಿದ್ದಾರೆ.

## ಅನಾಮಿಕ ಮುಸುಕದಾರಿ ವ್ಯಕ್ತಗಳಿಂದ ಕಳ್ಳತನಕ್ಕೆ ಯತ್ನ



ಬೆಳಗಾವಿ: ಜಿಲ್ಲೆಯ ಹುಕ್ಕೇರಿ ತಾಲೂಕಿನ ಹಿಡಕಲ್ ಡ್ಯಾಂ ಗ್ರಾಮದಲ್ಲಿ ಖ್ಯಾತ ಉದ್ಯಮಿಯೊರ್ವರ ಮನೆ ಮುಂದೆ ಮುಸುಕಾಧಾರಿಗಳಿಂದ ಹಲ್ಲೆಗೆ ಯತ್ನಿಸಿದ ಘಟನೆಯೊಂದು ತಡವಾಗಿ ಬೆಳಕಿಗೆ ಬಂದಿದೆ.

ವಿಕ್ಷಕರೆ ನೀವೂ ನೋಡಬಹುದು ಇದು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹಿಡಕಲ್ ಡ್ಯಾಂ ಗ್ರಾಮದಲ್ಲಿ ನಡೆದ ಘಟನೆ. ಖ್ಯಾತ ಉದ್ಯಮಿಯೊರ್ವರ ಮನೆ ಮುಂದೆ ಮುಸುಕಾಧಾರಿಗಳಿಂದ ಕಳ್ಳತನಕ್ಕೆ ಯತ್ನಿಸಿದ ಘಟನೆಯೊಂದು ತಡವಾಗಿ ಬೆಳಕಿಗೆ ಬಂದಿದೆ. ಕಳ್ಳತನಕ್ಕೆ ಯತ್ನಿಸಿದ ಘಟನೆಯೊಂದು ಸಿಸಿ ಟಿವಿ ಪೂಟೆಜ್‌ನಲ್ಲಿ ಬೆಳಕಿಗೆ ಬಂದಿದ್ದು, ಇನ್ನೂ ಈ ಖತರ್ನಾಕ ಖದೀಮರ ತಂಡ ಯಾವುದು ಎಲ್ಲಿಯಿಂದ ಬದರೂ ಎಂಬುದನ್ನು ಯಮಕನರಡಿ ಪೋಲಿಸರು ಪತ್ತೆ ಹಚ್ಚಬೇಕಿದೆ.

ಈ ಒಂದು ಸಿಸಿಟಿವಿ ದ್ರಶ್ಯ ನೋಡಿ ಗ್ರಾಮದ ಜನತೆಯಲ್ಲಿ ಭಯಬೀತ ವಾತಾವರಣ ಮೂಡಿದೆ. ಬೈಕ ಬೆಳಕು ಕಂಡು ಪರಾರಿಯಾದ ದ್ರಶ್ಯ ನೊಡಬಹುದು. ಯಮಕನಮರಡಿ ಪೋಲಿಸರು ಯಾವ ರೀತಿ ಸೂಕ್ತ ಕಾನೂನಿನ ಕ್ರಮ ಕೈಗೊಂಡು ಖತರ್ನಾಕ ಕಳ್ಳರ ಗ್ಯಾಂಗನ್ನು ಹೆಡೆಮುರಿ ಕಟ್ಟುತ್ತಾರೆಯೇ, ಕಾದು ನೊಡಬೇಕಿದೆ. ಇಂತಹ ಭಯಬಿತ ಮಚ್ಚು ಲಾಂಗೂ ತಳ್ವಾರ ಹಿಡಿದಿಕೊಂಡ ಬಂದ ಈ ಖತರ್ನಾಕ ಕಳ್ಳರ ಗ್ಯಾಂಗ ನೋಡಿದರೆ ಬಹುಶಃ ಮುಂದೆ ಸಿಕ್ಕರೆ ಯಾರನ್ನಾದ್ರೂ ಕೊಂದೆ ಬಿಡುವ ಪರಿಸ್ಥಿತಿ ಎದುರಾಗಿತ್ತು.

# ಜಿಲ್ಲಾ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ

ಬೆಳಗಾವಿ: 2023–24 ನೇ ಸಾಲಿಗೆ ಜಿಲ್ಲಾ ಮಟ್ಟದ ಕೈಗಾರಿಕಾ ವಸ್ತು ಪ್ರದರ್ಶನವನ್ನು ನವ್ಹೆಂಬರ್ 08, 2023 ರಿಂದ ನ.10 ರ ವರೆಗೆ ನಗರದ ಹ್ಯೂಮ್ ಪಾರ್ಕ, ಕ್ಲಬ ರೋಡ ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ ತಯಾರಿಸಲಾಗುವ ಗೃಹ ಕೈಗಾರಿಕೆ ಹಾಗೂ ಕರಕುಶಲ ವಸ್ತುಗಳು, ಕೈಮಗ್ಗದ ವಸ್ತ್ರಗಳು, ಖಾದಿ ಗ್ರಾಮೋದ್ಯೋಗ ಮತ್ತು ಇನ್ನಿತರ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮೇಳ ಏರ್ಪಡಿಸಲಾಗಿದೆ. ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಉತ್ತಮ ಅವಕಾಶವಿರುತ್ತದೆ.

ವಿವಿಧ ಸೂಕ್ಷ್ಮ/ಸಣ್ಣ ಕೈಗಾರಿಕಾ ಘಟಕಗಳು/ಕುಶಲ ಕರ್ಮಿಗಳು/ ಸ್ವ ಸಹಾಯ ಸಂಘ/ ಸಂಸ್ಥೆಯವರು ಹಾಗೂ ಸರಕಾರಿ ಇಲಾಖೆಯವರು ಇದರ ಪ್ರಯೋಜನ ಪಡೆಯಬಹುದಾಗಿದೆ.

ಮಳಿಗೆಗಾಗಿ ಅರ್ಜಿ ಸಲ್ಲಿಸಲು ಡಿಸೆಂಬರ್ 02, 2023 ಕೊನೆಯ ದಿನವಾಗಿರುತ್ತದೆ. ಅರ್ಜಿಯನ್ನು ಉಪ ನಿರ್ದೇಶಕರು (ಖಾಗ್ರಾ) ರವರ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಜಿಲ್ಲಾ ಪಂಚಾಯತ ವಿಭಾಗ, ಬೆಳಗಾವಿ ಈ ಕಚೇರಿಯಿಂದ ಪಡೆದು ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ: 9448989942, 9448866919 ಹಾಗೂ 8095420447ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ನಿಲುಗಡೆ

ಬೆಳಗಾವಿ: ಬೆಳಗಾವಿಯಲ್ಲಿ 3ನೇ ತ್ರೈಮಾಸಿಕ ಕೆಲಸ ನಿರ್ವಹಿಸುವ ಸಲುವಾಗಿ ಸದರಿ 110 ಕೆ.ವ್ಹಿ ನೆಹರು ನಗರ ವಿದ್ಯುತ್ ಉಪಕೇಂದ್ರದಿಂದ ಹೊರಡುವ ಪೂರಕಗಳ ಮೇಲೆ ಬರುವ ಬೆಳಗಾವಿ ನಗರದ ವಿವಿಧ ಪ್ರದೇಶಗಳಲ್ಲಿ ಬುಧವಾರ ನವ್ಹೆಂಬರ್ 29, 2023 ರಂದು ಬೆಳಿಗ್ಗೆ 09 ಗಂಟೆಯಿಂದ ಮದ್ಯಾಹ್ನ 3 ಗಂಟೆಯ ವರೆಗೆ ವಿದ್ಯುತ್ ನಿಲುಗಡೆಯಾಗಲಿದೆ.

ವಿದ್ಯುತ ನಿಲುಗಡೆಯಾಗುವ ಪ್ರದೇಶಗಳು:

ಎಪ–1 ಇಂಡಾಲ: ಕೆ.ಆಯ.ಡಿ.ಬಿ ಕಂಗ್ರಾಳಿ, ಇಂಡಸ್ಟ್ರೀಯಲ್ ಪ್ರದೇಶ, ನಂದಗುಡಿ ಆಯಲ್ ಮಿಲ್ಸ್, ಇಂಡಾಲ ಕಾಲೋನಿ,.

ಎಪ–3 ಶಿವಾಜಿ ನಗರ: ಶಿವಾಜಿ ನಗರ, ಆರ್.ಟಿ.ಓ ವೃತ್ತ, ವೀರಭದ್ರ ನಗರ, ಪೋಲಿಸ್ ಹೆಡ್ಡ್ ಕ್ವಾಟರ್ಸ, ಸಾಯಿ ಮಂದಿರ, ಪನಜಿಬಾಬಾ, ಜೈ ಡಿ ಕಾಲೋನಿ, ಕೋಟೆ ಕೆರೆ ಮೆಟಗುಡ, ಪಾರುಕಿಯಾ ಕಾಲೋನಿ,.

ಎಫ–4 ವೈಭವ ನಗರ: ವೈಭವ ನಗರ, ಬಸವ ಕಾಲೋನಿ, ವಿದ್ಯಾಗಿರಿ, ಅಝಂ ನಗರ, ಸಂಗಮೇಶ್ವರ ನಗರ, ಬಾಕ್ಸೈಟರೋಡ, ಶಾಹುನಗರ, ಎ.ಪಿ.ಎಮ್.ಸಿ, ಜ್ಯೋತಿನಗರ,

ಎಪ–5 ಶಿವಬಸವ ನಗರ: ಶಿವ ಬಸವ ನಗರ,, ಸೆ.ನಂ. 1,2,&3, ಕಟ್ಟಿ ಬಿಲ್ಡಿಂಗ್, ನ್ಯಾಯ ಮಾರ್ಗ, ಎಸ್.ಬಿ.ಆಯ್, ಸೈಟ್ ಶ್ರೀ ಹೌಸ್, ಕೆ.ಎಲ್.ಇ ಕಾಲೇಜ, ಜೆ.ಎನ್.ಎಮ್.ಸಿ, ಮುಜಾವಾರ ಆರ್ಕೇಡ, ಡಿ ಮಾರ್ಟ, ನೆಹರು ನಗರ, ಮೊದಲ ಅಡ್ಡ ರಸ್ತೆ, ಪ್ರಸಾದ ರೆಸಿಡೇನ್ಸಿ, ಎ.ಬಿ. ಪಾಟೀಲ್ ಮನೆ, ಸ್ಪಂದನಾ ಆಸ್ಪತ್ರೆ

ಎಫ–9 ಸದಾಶಿವನಗರ: ನೆಹರು ನಗರ 2ನೇ ಅಡ್ಡ ದಾರಿ, ಸದಾಶಿವನಗರ, ಮೇನ್ ಡಬ್ಬಲ್ ರೋಡ, ಸ್ಮಶಾನ, ಲಕ್ಷ್ಮೀ ಕಾಂಪ್ಲ್ಯಾಕ್ಷ್, ಸದಾಶಿವ ನಗರ, ಸರಳ ಹಿರೆಕಾರ ಮನೆ ಪ್ರದೇಶ, ಶಿವಾಲಯ ಪ್ರದೇಶ, ಶ್ರೀ ಶಾಂಮ ಗಾಟಗೆ, ಶ್ರೀ ಸೌಸ್, ಶಾನಭಾಗ ಟಿ.ಸಿ, ಭಾಸ್ಕರ ಢೈರಿ, ಬಿಲ್ಡರ ಚೌವಾನಿ,ಎಸ.ಸಿ.ಎಸ್..ಟಿ. ಹೆಣ್ಣು ಮಕ್ಕಳ ಹಾಸ್ಟೇಲ್

ಎಫ್–10 ಜಿನಾಬಕುಲ: ಜಿನಾಬಕುಲ ಪ್ರದೇಶ

ಎಫ್–11 ಸಿವಲ್ ಹಾಸ್ಪೀಟಲ್: ಸಿವಲ್ ಹಾಸ್ಪಿಟಲ್ ರಸ್ತೆ, ಟಿ.ಬಿ ವಾರ್ಡ, ಭಿಮ್ಸ್ ಕೋಲಾಪೂರ ವೃತ್ತ, ಬಿವ್‌ಟಿಪಿಕೇಷನ್ ಪ್ರದೇಶ, ಪಂತಲೋನಸೆ, ಕಾಟ್ವಾ ಬಿಲ್ಡಿಂಗ್, ಜೆಡ್ಜ ಕಾಲೋನಿ,.

ಎಫ್–14 ಸುಭಾಸ್ ನಗರ: ಗ್ಯಾಂಗ್‌ವಾಡಿ ವೃತ್ತ, ರಾಮದೇವ್ ಹೊಟೇಲ್, ಸಮೀತಿ ಕಾಲೇಜ, ಮರಾಠಾ ಮಾಡಲ್ ಕೋಲ್ಲಾಪೂರ ವೃತ್ತ, ಹಳೆ ಪಿ.ಬಿ. ರಸ್ತೆ, ಎಸ್.ಪಿ ಕಛೇರಿ ರಸ್ತೆ, ನಗರ ನಿಗಮ, ಸುಭಾಸ್‌ನಗರ, ಸಾಯಿ ಹೊಟೇಲ್, ಸ್ವಪನಾ ಬುಕ್ಕ ಹೌಸ್, ಎಕ್ಷಸ್ ಬ್ಯಾಂಕ

ಎಫ್–15 ವಿಶ್ವೇರಯ್ಯಾನಗರ: ವಿಶ್ವೇಶ್ವರಯ್ಯ ನಗರ ನೀರು ಸರಬರಾಜು, ಬ್ಯಾಂಕ ಆಫ್ ಮಹಾರಾಷ್ಟ್ರ, ರೆಡ್ಡಿ ಭವನ, ಜೈನ್ ಮಂದಿರ, ವಾಟರ ಸಪ್ಲಾಯ್, ಬೋರ್ಡ ಡಿ.ಸಿ. ಹೌಸ, ಆದರ್ಷ ಕಾಲೋನಿ, ವಿಶ್ವೇಶ್ವರಯ್ಯ ನಗರ ಪಿಡಬ್ಲ್ಯೂಡಿ ಕಾಲೋನಿ, ಕ್ಲಾಸ್1,2&3, ನೀರಾವರಿ ಇಲಾಖೆ ಕಾಲೋನಿ, ಹನುಮಾನ ನಗರ ರೇಲ್ ನಗರ ಸದಾಶಿವ ನಗರ, ಕೆ2 ಕಛೇರಿ, ಬಿ.ಇ.ಓ ಕಛೇರಿ, ಎನ್.ಸಿ.ಸಿ ಕಛೇರಿ, ಜಾದವ ನಗರ, ಸೈಟ್ ಶ್ರೀ ಹೌಸ್, ಉಮೇಶ ಕತ್ತಿ ಅಪಾರ್ಟಮೇಂಟ್, ಹುಗಾರ, ಸ್ರೀ ಹೌಸ್, ಸಾಯಿ ಅನಿಲ ಪೊದ್ದಾರ ಶ್ರೀ ಹೌಸ್, ಸಂಪಿಗೆ ರಸ್ತೆ, ಬುಡಾ ಕಾಂಪ್ಲ್ಯಾಕ್ಷ್, ಹನಿಮಾನ ನಗರ 2ರಸ್ತೆ ಸ್ಕೇಟುಂಗ್ ಮೈದಾನ ವಾಣೀಜ ತೆರಿಗೆ ಕಛೇರಿ,.

ಎಫ–16 ನೀರು ಸರಬರಾಜು: ಎಲ್ಲಾ ಕೆ.ಪಿ.ಟಿ.ಸಿ.ಎಲ್. ಹೆಸ್ಕಾಂ ಕಛೇರಿಗಳು.

ಸಾರ್ವಜನಿಕರು ಸಹಕರಿಸಬೇಕು ಎಂದು ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವ್ಯಕ್ತಿ ನಾಪತ್ತೆ



ಬೆಳಗಾವಿ: ನಗರದ ಕೆ.ಕೆ ಕೊಪ್ಪ ಗ್ರಾಮದ ನಿವಾಸಿಯಾದ ನಾಗಪ್ಪಾ ಬಸಪ್ಪಾ ನಂದಿ(54) ಇವರು ಜನವರಿ 20, 2023 ರಂದು ಸಂಜೆ 5.30 ರಿಂದ 7.30 ಗಂಟೆಯ ಸುಮಾರಿಗೆ ಮನೆ ನಂಬರ:345 ಜೋತಿ ನಗರ ಮೇನ್ ರೋಡ ಬೆಳಗಾವಿಯಿಂದ ಕಾಣೆಯಾಗಿದ್ದಾರೆ ಎಂದು ಇವರ ಹೆಂಡತಿ ಮಂಜುಳಾ ಅವರು ಎ.ಪಿ.ಎಮ್.ಸಿ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕಾಣೆಯಾದವರ ವಿವರ: ಎತ್ತರ:5 ಪೂಟ, ಗೊದಿಗೆಂಪು ಮೈಬಣ್ಣ, ಉದ್ದಮೂಗು, ಸದೃಢ ಮೈಕಟ್ಟು ಹಾಗೂ ಕಪ್ಪು ಬಣ್ಣದ ಫುಲ್ ಪ್ಯಾಂಟ್, ನೀಲಿ ಬಣ್ಣದ ಫುಲ್ ತೋಳಿನ ಶರ್ಟ ಧರಿಸಿರುತಾರೆ. ಕನ್ನಡ, ಮರಾಠಿ ಮಾತನಾಡುತ್ತಾರೆ.

ಸದರಿ ಚೆಹರೆಯುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಪೋಲೀಸ್ ಆಯುಕ್ತರು ಬೆಳಗಾವಿ ನಗರ, ಅಥವಾ ಪೋಲೀಸ್ ಇನ್ನಪೆಕ್ಟರ್ ಎ.ಪಿ.ಎಂ.ಸಿ ಪೊಲೀಸ ಠಾಣೆ ಬೆಳಗಾವಿ ದೂರವಾಣಿ ಸಂಖ್ಯೆ: (0831) 2405250. ಮೋಬೈಲ್ : 9480804106, 9480804047 ಗೆ ಸಂಪರ್ಕಿಸಬಹುದು ಎಂದು ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯುವಕ ನಾಪತ್ತೆ



ಬೆಳಗಾವಿ: ನಗರದ ಶಹಾಪೂರ ಇಲ್ಲಿನ ನಿವಾಸಿಯಾದ ಶಿವಾನಂದ ವಿಶ್ವನಾಥ ದಿವಟೆ(29) ಇವರು ನವ್ಹೆಂಬರ್ 10, 2023 ರಂದು ಬೆಳಿಗ್ಗೆ 9 ಗಂಟೆಯಿಂದ 10 ಗಂಟೆಯ ನಡುವಿನ ವೇಳಿಯಲ್ಲಿ ಮನೆಯಿಂದ ಹೋದವನು ಮರಳಿ ಬಂದಿಲ್ಲ ಎಂದು ಇವರ ಹೆಂಡತಿ ಪ್ರತಿಭಾ ಅವರು ಶಹಾಪೂರ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕಾಣೆಯಾದವರ ವಿವರ: ಎತ್ತರಃ 5–9 ಫೂಟ, ಕೋಲು ಮುಖ, ನೆಟ್ಟನೆಯ ಮೂಗು, ಗೋದಿಗೆಂಪು ಮೈಬಣ್ಣ, ಸಾದಾರಣ ಮೈಕಟ್ಟು, ಹಾಗೂ ಕಪ್ಪು ಬಣ್ಣದ ಅಂಗಿ ಹಾಗೂ ಬೂದು ಬಣ್ಣದ ಪ್ಯಾಂಟ ಧರಿಸಿರುತ್ತಾರೆ. ಕನ್ನಡ, ಮರಾಠಿ ಹಾಗೂ ಹಿಂದಿ ಭಾಷೆ ಮಾತನಾಡುತ್ತಾರೆ.

ಸದರಿ ಚೆಹರೆಯುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸ್ ಬೆಳಗಾವಿ ನಗರ ಪೋಲೀಸ್ ಕಂಟ್ರೋಲ್ ರೂಮ್ ದೂರವಾಣಿ ಸಂಖ್ಯೆ: (0831) 2405233. ಶಹಾಪೂರ ಪೊಲೀಸ ಠಾಣೆ: 0831–2405244, ಅಥವಾ ಪೊಲೀಸ್ ಇನ್ನಪೆಕ್ಟರ್ ಮೊ.ನಂ 9480804046 ಗೆ ಸಂಪರ್ಕಿಸಬಹುದು ಎಂದು ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇನ್ ಫ್ಲೂಯೆಂಜಾ ನಿಯಂತ್ರಣಕ್ಕೆ ಅಗತ್ಯ ಸಿದ್ಧತೆಗೆ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸೂಚನೆ



ಬೆಳಗಾವಿ: ಇನ್ ಫ್ಲೂಯೆಂಜಾ, ವೈರಲ್ ನ್ಯೂಮೋನಿಯಾ, ಡೆಂಗ್ಯೂ, ಜಾಂಡೀಸ್, ಐಎಲ್ಐ–ಸಾರಿ ಸೇರಿದಂತೆ ಯಾವುದೇ ರೀತಿಯ ಪ್ರಕರಣಗಳು ಕಂಡುಬಂದರೆ ತಾಲ್ಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಕ್ಷಣವೇ ಚಿಕಿತ್ಸೆ ನೀಡಲು ಅನುಕೂಲವಾಗುವಂತೆ ಸೂಕ್ತ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸೋಮವಾರ (ನ.27) ನಡೆದ ಸಮಗ್ರ ರೋಗಗಳ ಕಣ್ಗಾವಲು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೈರಲ್ ನ್ಯೂಮೋನಿಯಾ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣವೇ ಸೂಕ್ತ ಚಿಕಿತ್ಸೆ ಒದಗಿಸಲು ಆರೋಗ್ಯ ಇಲಾಖೆಯು ಸನ್ನದ್ಧವಾಗಿರಬೇಕು. ಬಿಮ್ಸ್ ಸೇರಿದಂತೆ ಇತರೆ ಆರ್‌ಟಿ.ಪಿ.ಸಿ.ಆರ್. ಕೇಂದ್ರಗಳು ನಿರಂತರವಾಗಿ ಕಾರ್ಯನಿರ್ವಹಿಸಬೇಕು.

ತುರ್ತು ಚಿಕಿತ್ಸೆಗೆ ಅನುಕೂಲವಾಗುವಂತೆ ಆಕ್ಸಿಜನ್, ಔಷಧಿ ಸಾಮಗ್ರಿಗಳು, ಪ್ರತ್ಯೇಕ ಕೊಠಡಿಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಇನ್ ಫ್ಲೂಯೆಂಜಾ, ವೈರಲ್ ನ್ಯೂಮೋನಿಯಾ, ಜಾಂಡೀಸ್, ಡೆಂಗ್ಯೂ, ಸೇರಿದಂತೆ ಯಾವುದೇ ರೋಗಗಳು ಹರಡದಂತೆ ಸರ್ವೇಕ್ಷಣಾಧಿಕಾರಿಗಳು ಜಿಲ್ಲೆಯ ಎಲ್ಲ ಕಡೆ ತೀವ್ರ ನಿಗಾವಹಿಸಬೇಕು.

ವೈದ್ಯರು ಸೇರಿದಂತೆ ಜಿಲ್ಲೆಯ ಆರೋಗ್ಯ ಇಲಾಖೆಯಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಡಿಎಚ್‌ಓ ಅವರಿಗೆ ತಿಳಿಸಿದರು.

ಬೆಳಗಾವಿಯಲ್ಲಿ ವಿಧಾನಮಂಡಳ ಚಳಿಗಾಲ ಅಧಿವೇಶನ ಕೂಡ ಡಿಸೆಂಬರ್ ನಲ್ಲಿ ನಡೆಯಲಿರುವುದರಿಂದ ಆರೋಗ್ಯ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿ ಸೇರಿದಂತೆ ಕರ್ತವ್ಯಕ್ಕೆ ನಿಯೋಜಿಸಿರುವ ಅಧಿಕಾರಿ ಮತ್ತು ಸಿಬ್ಬಂದಿಯ ಆರೋಗ್ಯ ಕೂಡ ಪರೀಕ್ಷಿಸಬೇಕು ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ್ ಕೋಣಿ ಅವರು, ಚೈನಾದಲ್ಲಿ ಇತ್ತೀಚೆಗೆ ಕಾಣಿಸಿಕೊಂಡಿರುವ ನ್ಯೂಮೋನಿಯಾ ಬಗೆಯ ಪ್ರಕರಣಗಳು ಕಂಡುಬಂದಲ್ಲಿ ಅವುಗಳ ಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳಲಾಗಿರುತ್ತದೆ ಎಂದು ಸಭೆಯಲ್ಲಿ ವಿವರಿಸಿದರು.

ಖಾಸಗಿ ಆಸ್ಪತ್ರೆಗಳು ಹೆಚ್ಚು ಶುಲ್ಕವನ್ನು ಪಡೆದುಕೊಂಡಿರುವ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ, ಆಯುಷ್ಮಾನ್ ಭಾರತ್ ಯೋಜನೆಯ ಅನುಸಾರ ಪ್ರಕರಣಗಳನ್ನು ವಿಲೇವಾರಿ ಮಾಡಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ.ಸಂಜಯ ದೊಡ್ಡಮನಿ, ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಗೀತಾ ಕಾಂಬಳೆ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಚಾಂದನಿ ದೇವಡಿ, ಚಿಕ್ಕೋಡಿಯ ಅಪರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ಗಡೇದ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಉದ್ಘಾಟನೆ



ಬೆಳಗಾವಿ: ನಗರದ ಸರ್ಕಾರಿ ಚಿಂತಾಮಣ್ ರಾವ್ ಪದವಿ ಪೂರ್ವ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವಾರ್ಷಿಕ ವಿಶೇಷ ಶಿಬಿರವನ್ನು ನಗರದ ಹಳೆ ಬೆಳಗಾವಿ ಶ್ರೀ ರಾಮಲಿಂಗೇಶ್ವರ ಸಮುದಾಯ ಭವನದಲ್ಲಿ ನ.20 ರಿಂದ ನ.26 ರವರೆಗೆ ಆಯೋಜಿಸಲಾಗಿತ್ತು.

ನಗರದ ಡಿ.ಡಿ.ಪಿ.ಯು. ಗಳಾದ ಎಂ.ಎಂ. ಕಾಂಬಳೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವಕರು ಎನ್.ಎಸ್.ಎಸ್. ಶಿಬಿರಗಳಂತ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶಗಳನ್ನು ಈಡೇರಿಸಬೇಕು ಎಂದು ಹೇಳಿದರು.

ಪ್ರಾಚಾರ್ಯರಾದ ಬಿ.ವಾಯ್.ಹನ್ನೂರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡಾ.ಡಿ.ಎನ್.ಮಿಸಾಳೆ, ಡಾ.ಕೆ.ಎನ್.ದೊಡಮನಿ, ಡಾ.ನಾಗರಾಜ ಮರಿಯಣ್ಣನವರ, ಕಿರಣಕುಮಾರ ಉಪಳೆ ಹಾಗೂ ಉಪನ್ಯಾಸಕಿ ಜ್ಯೋತಿ ಸಿ.ಎಂ. ಶ್ರೀ ಜಿ.ಎಸ್.ಬೇಟಗೇರಿ, ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿಯಾದ ವಿಜಯ ಲಕ್ಷ್ಮೀ ಜಿ. ಮುಚ್ಚಂಡಿ ಹಾಗೂ ಸಹಾಯಕ ಕಾರ್ಯಕ್ರಮ ಅಧಿಕಾರಿಗಳಾದ ಎಸ್.ಎಸ್.ಹಿರೇಮಠ ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಕಾರ್ತಿಕ್ ದೀಪೋತ್ಸವ ಆಚರಣೆ



ಬೆಳಗಾವಿ: ಪ್ರತಿ ವರ್ಷದಂತೆ ಬೆಳಗಾವಿ ನಗರದ ಬಸವನ ಕುಡಚಿ ಗ್ರಾಮದ ಶ್ರೀಗೌರಿ ದೇವಸ್ಥಾನದಲ್ಲಿ ದೀಪೋತ್ಸವ ಕಾರ್ಯಕ್ರಮವನ್ನು ಶ್ರೀಗೌರಿ ನಗರದಲ್ಲಿ ಸ್ಥಳೀಯರು ಹಮ್ಮಿಕೊಂಡಿದ್ದರು.

ಸುಮಾರು ನೂರು ದೀಪ ಗಳನ್ನು ಹಚ್ಚುವ ಮುಖಾಂತರ ಸ್ಥಳೀಯ ರಹವಾಸಿಗಳು ಸಿಹಿ ಹಂಚಿ ವಿಜ್ರಂಭಣೆಯಿಂದ ಗೌರಿ ದೇವಸ್ಥಾನದಲ್ಲಿ ಕಾರ್ತಿಕ್ ದೀಪೋತ್ಸವವನ್ನು ಆಚರಿಸಿದರು. ಈ ಸಮಯದಲ್ಲಿ ನಗರದ ಹಿರಿಯರು, ಸಾರ್ವಜನಿಕರು, ಸ್ಥಳೀಯರು ಭಾಗವಹಿಸಿದ್ದರು.

# ಲೇಕ್‌ವ್ಯೂ ಆಸ್ಪತ್ರೆಯ 13ನೇ ವಾರ್ಷಿಕೋತ್ಸವ ನಿಮಿತ್ತ ಉಚಿತ ಆರೋಗ್ಯ ತಪಾಸಣೆ ಶಿಬಿರ




ಬೆಳಗಾವಿ: "ರೋಗಿಗಳಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಯುಳ್ಳ ನೂತನ "ಲೇಕ್‌ವ್ಯೂ ಆಸ್ಪತ್ರೆ" ಶೀಘ್ರವೇ ಪ್ರಾರಂಭವಾಗಲಿದೆ ಎಂದು ಡಾ. ಗಿರೀಶ್ ಸೋನ್ವಾಲ್ಕರ್ ತಿಳಿಸಿದರು.

ಇಲ್ಲಿನ ಗಾಂಧಿನಗರದ ಖಾಸಗಿ ಹೋಟೆಲ್ ನಲ್ಲಿ ಬಿಎಚ್‌ಎಸ್ (BHS) ಲೇಕ್‌ವ್ಯೂ ಆಸ್ಪತ್ರೆಯ 13ನೇ ವಾರ್ಷಿಕೋತ್ಸವ ನಿಮಿತ್ತ ಆಯೋಜಿಸಲಾದ ಉಚಿತ ತಪಾಸಣೆ ಶಿಬಿರ ಮತ್ತು ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಗಳ ಬೆಳಗಾವಿ ಜನತೆಯ ಸಹಕಾರದಿಂದ ಲೇಕ್‌ವ್ಯೂ ಆಸ್ಪತ್ರೆಯ 13ನೇ ವಾರ್ಷಿಕೋತ್ಸವ ಆಚರಿಸಿಕೊಳ್ಳುತ್ತಿದ್ದೇವೆ. ನಿಮ್ಮ ಬಲದಿಂದ ಈ ಆಸ್ಪತ್ರೆಯ ಪಕ್ಕದಲ್ಲಿ ಹೊಸ ಕಟ್ಟಡ ಆರಂಭಲಾಗಿದೆ. ರೋಗಿಗಳಿಗೆ ಗುಣಮಟ್ಟದ ಸೇವೆ ನೀಡಲು ಹಗಲಿರುಳು ಶ್ರಮಿಸಲಾಗುವುದು ಎಂದರು.

ಲೇಕ್‌ವ್ಯೂ ಆಸ್ಪತ್ರೆಯು ಪ್ರತಿವರ್ಷ ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ಉಚಿತ ವೈದ್ಯಕೀಯ ತಪಾಸಣೆ ನಡೆಸಲಾಗುತ್ತದೆ. ಸಮುದಾಯದೊಳಗೆ ಆರೋಗ್ಯ ಮತ್ತು ಯೋಗಕ್ಷೇಮದ ಸಂಸ್ಕೃತಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿವೆ ಡಾ. ಗಿರೀಶ ಸೋನ್ವಾಲ್ಕರ್ ಅವರು ಹೇಳಿದರು.

ಈ ಸಂದರ್ಭದಲ್ಲಿ ಡಾ.ಮಹಾಂತೇಶ ತೋಡಕರ, ಡಾ.ವಿಶ್ವನಾಥ ಉಪ್ಪಲದಿನ್ನಿ ಹಾಗೂ ವೈದ್ಯರ ತಂಡ, ಲೇಕ್‌ವ್ಯೂ ಆಸ್ಪತ್ರೆಯ ಇತರರು ಇದ್ದರು.

# ಲೋಕ ಕಲ್ಯಾಣಾರ್ಥವಾಗಿ ಶ್ರೀನಿವಾಸ ಕಲ್ಯಾಣೋತ್ಸವ




ಬೆಳಗಾವಿ: ಲೋಕಕಲ್ಯಾಣಾರ್ಥವಾಗಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ಹಾಗೂ 51 ನೇ ರಾಜ್ಯಮಟ್ಟದ ಬ್ರಾಹ್ಮಣ ವಧು–ವರಾನ್ವೇಷಣ ಸಮಾವೇಶವನ್ನು ಬೆಳಗಾವಿಯಲ್ಲಿ ಆಯೋಜಿಸಲಾಗಿದ್ದು ಈ ಕುರಿತಂತೆ ಪತ್ರಿಕಾ ಗೋಷ್ಠಿಯನ್ನು ಚೆನ್ನಮ್ಮ ವೃತ್ತದ ಬಳಿಯಿರುವ ಸಾಹಿತ್ಯ ಭವನದ ಸಭಾಭವನದಲ್ಲಿ ಕರೆಯಲಾಗಿತ್ತು.

ಈ ಸಂದರ್ಭದಲ್ಲಿ ಬೆಳಗಾವಿ ಅಖಿಲ ಬ್ರಾಹ್ಮಣ ಸಮಾಜ ದ ಜಿಲ್ಲಾಧ್ಯಕ್ಷರಾದ ಶ್ರೀ ಎಸ್. ಎಂ. ಕುಲಕರ್ಣಿಯವರು ಮಾತನಾಡಿ ಸಪ್ತಪದಿ ಫೌಂಡೇಶನ್ ಟ್ರಸ್ ಇವರು ಬೆಳಗಾವಿಯಲ್ಲಿ ಹಮ್ಮಿಕೊಳ್ಳುತ್ತಿರುವ 51 ನೇ ರಾಜ್ಯ ಮಟ್ಟದ ಬ್ರಾಹ್ಮಣ ವಧು–ವರಾನ್ವೇಷಣ ಸಮಾವೇಶಕ್ಕೆ ಬೆಳಗಾವಿಯ ಎಲ್ಲ ಬ್ರಾಹ್ಮಣ ಸಂಘಟನೆಯವರು ಸೇರಿಕೊಂಡು ಈ ಸಮ್ಮೇಳನ ಯಶಸ್ವಿಗೊಳಿಸುವಲ್ಲಿ ಮುಂದಾಗಬೇಕು ಎಂದು ಎಲ್ಲರಲ್ಲಿ ಕೇಳಿಕೊಂಡರು.

ಸಪ್ತಪದಿ ಫೌಂಡೇಶನ್ – ಮೈಸೂರು ಮತ್ತು ಬೆಂಗಳೂರು, ವಿಶ್ವ ಮಧ್ವ ಮಹಾಪರಿಷತ್ ಬೆಳಗವಿ ಘಟಕ, ಬೆಳಗಾವಿ ಜಿಲ್ಲಾ ಅಖಿಲ ಬ್ರಾಹ್ಮಣ ಸಮಾಜ, ಶ್ರೀ ಶಂಕರಾಚಾರ್ಯ ಸೇವಾ ಸಮಿತಿ ಬೆಳಗಾವಿ, ಜಿಲ್ಲಾ ವಿವಿಧ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಡಿ. 2 ಶನಿವಾರ ಮತ್ತು 3 ರವಿವಾರ ಬೆಳಿಗ್ಗೆ 9 ರಿಂದ ಸಾಯಂಕಾಲ 7 ಗಂಟೆಯ ವರೆಗೆ 51 ನೇ ರಾಜ್ಯ ಮಟ್ಟದ ಬ್ರಾಹ್ಮಣ ವಧು ವರಾನ್ವೇಶಣಾ ಸಮಾವೇಶ ಮತ್ತು ಶೀಘ್ರಮೇವ ಕಲ್ಯಾಣ ಪ್ರಾಪ್ತಿಗಾಗಿ ಡಿ. 3 ಸಂಜೆ 3 ಗಂಟೆ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವವನ್ನು ನಗರದ ಶ್ರೀ ಸತ್ಯಪ್ರಮೋದ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಸಪ್ತಪದಿ ಫೌಂಡೇಶನ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀನಿವಾಸ ಭಾರಧ್ವಾಜ ಹೇಳಿದರು.

ಮುಂದೆ ಮಾತನಾಡುತ್ತ ಅವರು ಜನದಟ್ಟಣೆ ತಡೆಯುವ ಉದ್ದೇಶದಿಂದ ಬೆಳಗಾವಿ ಸುತ್ತಮುತ್ತಲಿನ ಆಸಕ್ತ ವಧು ವರರು ಪೋಷ್ಟ ಕಾರ್ಡ ಅಳತೆಯ ನೈಜ ಪೋಟೊ, ಜಾತಕ, ಸ್ವವಿವರಗಳೊಂದಿಗೆ ನ. 25 ರಿಂದ ಡಿ. 1 ರವರೆಗೆ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಡಾ.ಶ್ರೀಧರ ಹುಕ್ಕೇರಿ, ಶಿರೀಷ ಕಾನೇಟ್ಕರ ಮಾತನಾಡಿದರು. ಪ್ರಿಯಾ ಪುರಾಣಿಕ ವಂದಿಸಿದರು. ಸುದ್ದಿಗೋಷ್ಠಿಯಲ್ಲಿ ಹಿರಿಯ ವಿಪ್ರ ಮುಖಂಡರಾದ ರಾಕೇಶ ದೇಶಪಾಂಡೆ, ಅನಂತ ಚಿಂಚಣಿ, ಮಾಲತೇಶ ಪಾಟೀಲ, ಮುಂತಾದವರು ಭಾಗವಹಿಸಿದ್ದರು. ಹೆಚ್ಚಿನ ಮಾಹಿತಿಗಾಗಿ ಮೊ, ಸಂಖ್ಯೆ 9449425536 ಹಾಗೂ 8217876335 ಸಂಪರ್ಕಿಸಬಹುದಾಗಿದೆ.

# ಭುವನ ಬಡಸ್ಕರ್ ಬಾಕ್ಸಿಂಗ್‌ದಲ್ಲಿ, ಧವನಿ ಬರಡೆ ಈಜು ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಬೆಳಗಾವಿ: ಪದವಿ ಪೂರ್ವ ಶಿಕ್ಷಣ ಇಲಾಖೆಯ ವತಿಯಿಂದ ಬೆಂಗಳೂರಿನಲ್ಲಿ ಇತ್ತೀಚೆಗೆಜರುಗಿದ 57 ರಿಂದ 60 ಕೆಜಿರಾಜ್ಯ ಮಟ್ಟದ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಬೆಳಗಾವಿಯ ಜೆಜಿಐ ಸಂಸ್ಥೆಯಜೈನ ಪದವಿ ಪೂರ್ವ ವಿಜ್ಞಾನ ವಿಭಾಗದ ಪ್ರಥಮ ವರ್ಗದಲ್ಲಿ ಓದುತ್ತಿರುವ ಭುವನ ಬಡಸ್ಕರ್ ಪ್ರಥಮ ಸ್ಥಾನ ಪಡೆದುಕೊಂಡು ಚಿನ್ನದ ಪದಕ ಪಡೆದುಕೊಂಡು ರಾಷ್ಟ್ರ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಅದೇರೀತಿ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದರಾಜ್ಯ ಮಟ್ಟದಈಜು ಸ್ಪರ್ಧೆಯಲ್ಲಿಧವನಿ ಬರಡೆ ಅವರು400 ಮೀಟರ್ ವೈಯಕ್ತಿ ವಿಭಾಗದಲ್ಲಿ ಪ್ರಥಮ ಸ್ಥಾನದೊಂದಿಗ 'ಚಿನ್ನದ ಪದಕ ಹಾಗೂ 200 ಮೀಟರ್ ಬ್ರೆಸ್ಟ್ ಸ್ಟ್ರಾಕ್ ಮತ್ತು 100 ಮೀಟರ್ ರಿಲೆಯಲ್ಲಿ ಕಂಚಿನ ಪದಕ ಪಡೆದು ರಾಷ್ಟ್ರದ ಈಜು ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಭುವನ ಬಡಸ್ಕರ್ ಮತ್ತುಧವನಿ ಬರಡೆ ಅವರ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಜೆಜಿಐ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರಾದ ಶ್ರದ್ಧಾಕಟವಟೆ, ಜೈನ ಪಿಯು ಕಾಲೇಜಿನ ಪ್ರಾಚಾರ್ಯರಾದ ರೋಹಿಣಿ ಕೆ.ಬಿ. ಉಪ ಪ್ರಾಚಾರ್ಯರಾದ ವಿಶಾಲ ಪಾಟೀಲ ಶುಭ ಹಾರೈಯಿಸಿದ್ದಾರೆ.

## ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ವಿತರಿಸಿದ ಯುವ ನಾಯಕ ರಾಹುಲ್ ಜಾರಕಿಹೊಳಿ



ಗೋಕಾಕ: ರಾಷ್ಟ್ರ ಮಟ್ಟದ ಕ್ರೀಡಾಪಟುಗಳಿಗೆ ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು ಪ್ರೋತ್ಸಾಹ ಧನ ವಿತರಣೆ ಮಾಡಿದರು.

ಪ್ಯಾರಾ ಟೇಬಲ್ ಟೆನಿಸ್ ಚಾಂಪಿಯನ್ಸ್ ಶಿಪ್ ಯಲ್ಲಿ ಕರ್ನಾಟಕ ರಾಜ್ಯದಿಂದ ಪ್ರತಿನಿಧಿಸಿದ ಕ್ರೀಡಾಪಟು ಸವಿತಾ ಅಜ್ಜನಕಟ್ಟಿ ಸಾಧನೆ ಮಾಡಿದ್ದಾರೆ. ರಾಜ್ಯ ಮಟ್ಟದ ಶಾಲಾ ಮಕ್ಕಳ ಆಟೋಟ ಸ್ಪರ್ಧೆಗಳಲ್ಲಿ ಮುದೋಳ ತಾಲೂಕಿನ ನಾಗಿನ ಮೇತ್ರಿ ಎಂಬ ಕ್ರೀಡಾಪಟು ಕರಾಟೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಈ ಇಬ್ಬರು ಕ್ರೀಡಾಪಟುಗಳು ರಾಷ್ಟ್ರ ಮಟ್ಟದ ಕ್ರೀಡೆಗೆ ಭಾಗವಹಿಸಲು ಹೊರಟಿದ್ದು, ಅವರಿಗೆ ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು ಪ್ರೋತ್ಸಾಹ ಧನ ನೀಡಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಹಿಲ್ ಗಾರ್ಡನ್ ಸಿಬ್ಬಂದಿಗಳಾದ ವಿಠ್ಠಲ ಪರಸನ್ನವರ, ಸತೀಶ್ ಜಾರಕಿಹೊಳಿ ಫೌಂಡೇಶನ್ ಸದಸ್ಯ ಜುಬೇರ್ ಮಿರ್ಜಾಬಾಯಿ ಹಾಗೂ ಅನೇಕರು ಉಪಸ್ಥಿತರಿದ್ದರು.

# ಫ್ರೆಂಡ್ಸ್ ಯೂನಿಟಿ ಕಾರ್ಯ ಶ್ಲಾಘನೀಯ: ಚನ್ನಬಸವ ಶ್ರೀ



ಕೆಂಭಾವಿ: ರಕ್ತದಾನವೆಂದರೆ ಅದು ಜೀವದಾನ ಯುವಕರು ಸೇರಿದಂತೆ ಪ್ರತಿಯೊಬ್ಬರೂ ರಕ್ತದಾನದಲ್ಲಿ ಭಾಗಿಯಾಗಬೇಕು ಎಂದು ಹಿರೇಮಠದ ಪೀಠಾಧಿಪತಿ ಚನ್ನಬಸವ ಶಿವಾಚಾರ್ಯರು ಕರೆ ನೀಡಿದರು.

ಪಟ್ಟಣದ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಫ್ರೇಂಡ್ಸ್ ಯೂನಿಟಿ ಮ್ಯಾಗೇರಿ ವತಿಯಿಂದ ಸೋಮವಾರ ಹಮ್ಮಿಕೊಂಡ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು ಪಟ್ಟಣದ ಮ್ಯಾಗೇರಿಯ ಯುವ ಮಿತ್ರರೆಲ್ಲರೂ ಗೆಳೆಯರ ಬಳಗ ಮಾಡಿಕೊಂಡು ಪಟ್ಟಣಕ್ಕೆ ಮಾದರಿಯಾಗುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಯುವಕರ ಒಗ್ಗಟ್ಟಿನಿಂದಲೆ ಪ್ರತಿದಿನ ಸಾಯಂಕಾಲ ರೇವಣಸಿದ್ದೇಶ್ವರ ದೇವಸ್ಥಾನದಲ್ಲಿ ಪುರಾಣ ಪ್ರವಚನ ಜರಗುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಮ್ಯಾಗೇರಿಯ ಫ್ರೆಂಡ್ಸ್ ಯೂನಿಟಿ ಕೆಲಸವನ್ನು ಬಣ್ಣಿಸಿದರು.

ಮಾಳಹಳ್ಳಿಯ ಪೂಜ್ಯ ಕೆಂಚರಾಯ ಪೂಜಾರಿ ಅವರು ಮಾತನಾಡಿ, ದುಶ್ಚಟಗಳಿಂದ ಯುವಕರು ಬಲಿಯಾಗುತ್ತಿರುವ ಇಂತಹ ಸಂದರ್ಭದಲ್ಲಿ ಮ್ಯಾಗೇರಿಯ ಯುವಕರು ಸತ್ಕಾರ್ಯಗಳನ್ನು ಮಾಡಿ ಎಲ್ಲರಿಂದ ಭೇಷ್ ಎನಿಸಿಕೊಂಡಿದ್ದಾರೆ. ಯಾರ ಹತ್ತಿರವೂ ಸಹಾಯಕ್ಕೆ ಅಂಗಲಾಚದೆ ಇಂತಹ ಕಾರ್ಯಕ್ಕೆ ಮುಂದಾಗಿರುವದು ಒಳ್ಳೆಯ ಬೆಳವಣಿಗೆ ಎಂದು ಹೇಳಿದರು. ಸ್ಪಂದನ ಸಂಸ್ಥೆಯ ಅಧ್ಯಕ್ಷ ಡಿ.ಸಿ.ಪಾಟೀಲ ಪ್ರಾಸ್ತಾವಿಕ ಮಾತನಾಡಿದರು.

ಶಿಬಿರದಲ್ಲಿ ಸುಮಾರು 50 ಜನ ರಕ್ತದಾನ ಮಾಡಿದರು.ಪ್ರಮುಖರಾದ ಸಾಹೇಬಗೌಡ ಹೂಗಾರ, ಡಾ.ರವಿ ಅಂಗಡಿ, ಡಾ. ಯಂಕನಗೌಡ ಪಾಟೀಲ್, ವೀರೇಶ ಭಜಂತ್ರಿ, ನಾಗರಾಜ ಶಾಸ್ತ್ರಿ ಯಮನಪ್ಪ ಕುಂಬಾರ, ಬಸವರಾಜ ಕುಂಬಾರ, ಶಶಿ ಮ್ಯಾಗೇರಿ ಸೇರಿದಂತೆ ಪಟ್ಟಣದ ಪ್ರಮುಖರಿದ್ದರು.

**ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಬೈಲಹೊಂಗಲ**

ಶಾಖೆ :–ಸಾಂಬ್ರಾ ತಾ/ಜಿ : ಬೆಳಗಾವಿ

## ಹರಾಜು ಪ್ರಕಟಣೆ

**ಇಪಿ ಸಂಖ್ಯೆ:ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ.ಬೆ/105/2022–23**

ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ ಶಾಖೆ– ಹಿರೇಬಾಗೇವಾಡಿ ಸುಸ್ತಿದಾರರಾದ 1) ಶ್ರೀ ನಿಂಗನಗೌಡ ಬಸನಗೌಡ ಹಳೇಗೌಡ್ರ ಸಾ ॥ ಯರಗೊಪ್ಪ, ತಾ/ಬೈಲಹೊಂಗಲ ಜಿ: ಬೆಳಗಾವಿ 2) ಶ್ರೀ ಬಸವರಾಜ ನಾಗಪ್ಪ ಹಲ್ಕಿ ಹಾಗೂ 3)ಶ್ರೀ ಶಿವಾನಂದ ಬಸಲಿಂಗಪ್ಪ ಅರಳಿಕಟ್ಟಿ ಇವರಿಂದ ದಿನಾಂಕ:27/10/2023ಕ್ಕೆ ಬರಬೇಕಾದ ಬಾಕಿ ಮೊತ್ತರೂ. 1,21,172+ ಬಡ್ಡಿ ಮತ್ತು ಇತರೆ ವೆಚ್ಚಗಳ ಸಂದಾಯದ ಬಗ್ಗೆ ಈ ಕೆಳಗೆ ನಮೂದಿಸಲಾದ ಸ್ಥಿರ ಸ್ವತ್ತುಗಳ ಹರಾಜನ್ನು ಶುಕ್ರವಾರ ದಿನಾಂಕ:01.12.2023 ರಂದು ಬಹಿರಂಗ ಹರಾಜು ಮಾಡಲಾಗುವುದು ಅಥವಾ ಹರಾಜನ್ನು ಮುಂದೂಡಲಾದ ದಿನಾಂಕದಂದು ಸ್ಥಿರ ಸ್ವತ್ತುಗಳಿರುವ ತಿಗಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಯರಗೊಪ್ಪ ಗ್ರಾಮದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದೆಂದು ತಿಳಿಸಲಾಗಿದೆ. ಸದರಿ ಹರಾಜು ಬೆಳ್ಳಗ್ಗೆ 11:00 ಘಂಟೆಗೆ ಪ್ರಾರಂಭವಾಗಿ ಅತ್ಯಧಿಕ ಮೊತ್ತಕ್ಕೆ ಬಿಡ್ಡುಗುವವರಿಗೆ ಸ್ವತ್ತನ್ನು ಮೂರು ಸಲಕ್ಕಾಗಿ ಖಾಯಂ ಮಾಡಲಾಗುವುದು.

ಸ್ಥಿರ ಸ್ವತ್ತುಗಳ ವಿವರ:–1) ಶ್ರೀ ನಿಂಗನಗೌಡ ಬಸನಗೌಡ ಹಳೇಗೌಡ್ರ ಸಾ॥ ಯರಗೊಪ್ಪ ತಾ: ಬೈಲಹೊಂಗಲ ಜಿ:ಬೆಳಗಾವಿ ಗ್ರಾಮ ತಿಗಡಿ ಗ್ರಾಮಪಂಚಾಯತಿ ಯರಗೊಪ್ಪ ಗ್ರಾಮದ ಆಸ್ತಿ ನಂ:161/ಬಿ/ 1796ಬಿ ಪಂಚಾಯತಿಯ ಆಸ್ತಿಯಾಗಿರುತ್ತದೆ.

**ಹರಾಜು ಬಗ್ಗೆ ಸಂಪರ್ಕಿಸಬೇಕಾದ ವಿಳಾಸ :**

: ಮಾರಾಟಾಧಿಕಾರಿಗಳು :

ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ

ಪ್ರಧಾನ ಕಛೇರಿ: ಬೈಲಹೊಂಗಲ ಶಾಖೆ:–ಹಿರೇಬಾಗೇವಾಡಿ

ಮೊಬೈಲ್ ನಂ:9606098032, 7259001979

# ಬಿಜೆಪಿ ನಗರ ಸೇವಕ ಬಂಧನ; ಬಿಜೆಪಿ ಕಾರ್ಯಕರ್ತರಿಂದ ಆಕ್ರೋಶ

ಬೆಳಗಾವಿ: ನವೆಂಬರ್ 23ರಂದು ಬೆಳಗಾವಿಯ ಭಾಗ್ಯನಗರದಲ್ಲಿ ಮೊಬೈಲ್ ಟವರ್ ನಿರ್ಮಿಸಲು ಅನುಮತಿ ಸಂಬಂಧ ಬಿಜೆಪಿ ನಗರ ಸೇವಕ ಹಾಗೂ ಸ್ಥಳೀಯರ ನಡುವಿನ ಗಲಾಟೆ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ.

ತಡರಾತ್ರಿ ನಗರ ಸೇವಕ ಅಭಿಜಿತ್ ಜವಳಕರ್‌ರನ್ನು ಪೊಲೀಸರು ಬಂಧಿಸಿದ್ದಾರೆ.

ಅಭಿಜಿತ್ ಜವಳಕರ್ ಅವರನ್ನುಬಂಧಿಸಿರುವ ಟಿಳಕವಾಡಿ ಠಾಣೆಪೊಲೀಸರು ಹಿಂಡಲಗಾ ಜೈಲಿಗೆ ರವಾನಿಸಿದ್ದಾರೆ. ನಿನ್ನೆಯಷ್ಟೇ ಪಾಲಿಕೆಸದಸ್ಯ ಅಭಿಜಿತ್ ಬಂಧಿಸುವಂತೆ ಎಂಇಎಸ್ ಕಾರ್ಯಕರ್ತರುಟಿಳಕವಾಡಿ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ಮಾಡಿದ್ದರು.

ಪ್ರತಿಭಟನೆ ಬೆನ್ನಲ್ಲೇ ರಾತ್ರೋರಾತ್ರಿ ಬಂಧಿಸಲಾಗಿದೆ. ಬಂಧನ ಖಂಡಿಸಿ ಬಿಮ್ಸ್ ಆಸ್ಪತ್ರೆ ಎದುರು ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೊಬೈಲ್ ಟವರ್ ವಿಚಾರವಾಗಿ ನಗರ ಸೇವಕ ಅಭಿಜಿತ್ ಜವಳಕರ್ ಮತ್ತು ಸ್ಥಳೀಯ ನಿವಾಸಿ ರಮೇಶ್ ಪಾಟೀಲ್ ಮಧ್ಯೆ ಗಲಾಟೆ ನಡೆದಿತ್ತು.

ಬಳಿಕ ಇಬ್ಬರೂ ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಪರಸ್ಪರ ದೂರು ನೀಡಿದ್ದರು. ತಮ್ಮ ಮೇಲೆ ಹಲ್ಲೆ ಮಾಡಿರುವ ರಮೇಶ್



ಪಾಟೀಲ್ ಬಂಧಿಸುವಂತೆ ಟಿಳಕವಾಡಿ ಪೊಲೀಸ್ ಠಾಣೆ ಮುಂದೆ ಬಿಜೆಪಿ ನಗರಸೇವಕರು ಪ್ರತಿಭಟನೆ ಮಾಡಿದ್ದರು. ಪ್ರತಿಭಟನೆಗೆ ಮಣಿದು ಪೊಲೀಸರು ರಮೇಶ್ ಪಾಟೀಲ್‌ರನ್ನು ಬಂಧಿಸಿದ್ದರು. ಇದಾದ

ನಂತರ ಸಂಜೆ ಎಂಇಎಸ್ ಕಾರ್ಯಕರ್ತರು ನಗರ ಸೇವಕ ಅಭಿಜಿತ್ ಜವಳಕರ್ ಬಂಧಿಸುವಂತೆ ಪ್ರತಿಭಟನೆ ಮಾಡಿದ್ದರು. ಇದರ ಬೆನ್ನಲ್ಲೇ ಬಿಜೆಪಿ ನಗರ ಸೇವಕನನ್ನು ರಾತ್ರೋರಾತ್ರಿ ಬಂಧಿಸಲಾಗಿದೆ.

ಬಿಜೆಪಿ ನಿಯೋಗದಿಂದ ಆಯುಕ್ತರ ಭೇಟಿ: ನಗರ ಸೇವಕನ ಬಂಧನಖಂಡಿಸಿ ಸೋಮವಾರ ಬಿಜೆಪಿ ನಿಯೋಗವು ನಗರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಕಾಂಗ್ರೆಸ್ ಸರ್ಕಾರದ ಪ್ರತಿನಿಧಿಗಳ ಒತ್ತಡಕ್ಕೆ ಮಣಿದು ಬಿಜೆಪಿ ಸದಸ್ಯನನ್ನು ಬಂಧಿಸಲಾಗಿದೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದಾರೆ.

ಮನವಿ ಸಲ್ಲಿಸಿದ ಬಳಿಕ ಬಿಜೆಪಿ ಮಹಾನಗರ ಅಧ್ಯಕ್ಷ ಅನಿಲ ಬೆನಕೆ ಮಾತನಾಡಿ, "ಮಹಾನಗರ ಪಾಲಿಕೆಯನ್ನು ಸೂಪರ್‌ಸೀಡ್ ಮಾಡುವ ಉದ್ದೇಶ ಕಾಂಗ್ರೆಸ್ ಹಾಗೂ ಎಂಇಎಸ್ ಮುಖಂಡರಿಗಿದೆ.

ಆ ಕಾರಣಕ್ಕೆ ಬಿಜೆಪಿ ನಗರಸೇವಕರನ್ನು ಹೆದರಿಸುವ ತಂತ್ರ ಮಾಡುತ್ತಿದ್ದಾರೆ.

ಈ ಕಾರಣಕ್ಕೆ ನಮ್ಮ ಸದಸ್ಯ ಅಭಿಜಿತ್ ಜವಳಕರ್ ಅವರನ್ನು ಬಂಧಿಸಲಾಗಿದೆ. ಅವರು ಡಿಸ್ಚಾರ್ಜ್ ಕೂಡ ಆಗಿಲ್ಲ, ಆಸ್ಪತ್ರೆಯ ಬಿಲ್ ಕೂಡ ಪಾವತಿಸಿರಲಿಲ್ಲ. ಪೊಲೀಸರು ರಾತ್ರೋರಾತ್ರಿ ಆಸ್ಪತ್ರೆಯಿಂದಲೇ ಬಂಧಿಸಿದ್ದಾರೆ.

ಈ ಕಾರಣಕ್ಕೆ ನಾವು ನಗರ ಪೊಲೀಸ್ ಆಯುಕ್ತರನ್ನು ಭೇಟಿ ಮಾಡಿದ್ದೇವೆ. ನಮ್ಮ ಸದಸ್ಯನ ಬಂಧಿಸಿದ ಪೊಲೀಸ್ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕೆಂಬ ಬೇಡಿಕೆ ನಮ್ಮದಾಗಿತ್ತು. ಆದರೆ ಕಮೀಷನರ್ ಸ್ಪಂದಿಸಿಲ್ಲ. ಭೇಟಿಯಾಗಿ ಚರ್ಚಿಸಿದ್ದು ನಮಗೆ ತೃಪ್ತಿ ತಂದಿಲ್ಲ. ಹೀಗಾಗಿ ಕೋರ್ ಕಮಿಟಿ ಮೀಟಿಂಗ್ ನಡೆಸಿ, ನಾವು ಹೋರಾಟಕ್ಕೆಸಿದ್ಧರಾಗುತ್ತೇವೆ" ಎಂದು ಎಚ್ಚರಿಸಿದ್ದಾರೆ.

"ಜಿಲ್ಲಾಉಸ್ತುವಾರಿ ಸಚಿವರು, ಶಾಸಕ ಸೇರಿ ಕಾಂಗ್ರೆಸ್‌ನಾಯಕರ ಅಣತಿಯಂತೆ ಪೊಲೀಸರು ಕೆಲಸಮಾಡುತ್ತಿದ್ದಾರೆ. ಅಭಿಜಿತ್ ಸಲ್ಲಿಸಿದ ದೂರು,ಸಾಕ್ಷ್ಯ ಆಧರಿಸಿ ಈ ಮೊದಲು ರಮೇಶ್ ಪಾಟೀಲ ಬಂಧಿಸಲಾಗಿತ್ತು. ಅದೇ ದಿನ ಅಭಿಜಿತ್ ಜವಳಕರ್ ಬಂಧಿಸಬೇಕಿತ್ತು, ಆದರೆ ಮೂರು ದಿನವೇಕೆಕಾದರು.

ಕಾಂಗ್ರೆಸ್ ಬೆದರಿಕೆಗೆ ನಾವು ಹೆದರಲ್ಲ, ಸರ್ಕಾರದ ವಿರುದ್ಧ ಹೋರಾಡುತ್ತೇವೆ.ಮೇಯರ್ ಅವರನ್ನು ಅಪಮಾನಿಸುವ ಕೆಲಸವನ್ನು ಪೊಲೀಸರು ಮಾಡುತ್ತಿದ್ದಾರೆ"ಎಂದು ಅನಿಲ ಬೆನಕೆ ಆರೋಪಿಸಿದರು.

ಬೆಳಗಾವಿ ನಗರ ಪೊಲೀಸ್ ಆಯುಕ್ತರ ಪ್ರತಿಕ್ರಿಯೆ: ಆಸ್ಪತ್ರೆಯಿಂದಲೇನಗರ ಸೇವಕನನ್ನು ಬಂಧಿಸಲಾಗಿದೆ ಎಂಬ ಬಿಜೆಪಿ ಆರೋಪವನ್ನು ಪೊಲೀಸರು ತಳ್ಳಿಹಾಕಿದ್ದಾರೆ.

ಈ ಬಗ್ಗೆ ಬೆಳಗಾವಿ ನಗರಪೊಲೀಸ್ ಆಯುಕ್ತ ಎಸ್. ಎನ್.ಸಿದ್ದರಾಮಪ್ಪ ಮಾತನಾಡಿ, "ಕೂಲಂಕಷವಾಗಿ ವಿಚಾರಣೆ ನಡೆಸಿರುವ ತನಿಖಾಧಿಕಾರಿ ನ್ಯಾಯ ಸಮ್ಮತವಾಗಿ ತನಿಖೆ ಮಾಡಿ, ಇ ಬ್ಬರ ನಡುವೆ ಹೊಡೆದಾಟ ಆಗಿದ್ದರಿಂದ ಇಬ್ಬರ ಮೇಲೂ ಕ್ರಮ ಕೈಗೊಂಡಿದ್ದಾರೆ.

ನಮ್ಮ ಪೊಲೀಸರ ಮೇಲೆ ಯಾರ ಒತ್ತಡವೂ ಇಲ್ಲ. ಸುಳ್ಳು ದೂರು ಕೊಟ್ಟಿದ್ದಾರೆ ಎಂಬ ಆರೋಪದ ಬಗ್ಗೆ ಟಿಳಕವಾಡಿ ಸಿಪಿಐ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ಖಡೇಬಜಾರ್ ಎಸಿಪಿ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಹೆಚ್ಚಿನ ವಿವರ ಕಲೆ ಹಾಕುತ್ತಿದ್ದಾರೆ. 12 ಗಂಟೆಗೆ ಆಸ್ಪತ್ರೆಯಿಂದ ನಗರ ಸೇವಕ ಡಿಸ್ಚಾರ್ಜ್ ಆಗಿರುವ ಕುರಿತು ನಮ್ಮಲ್ಲಿ ದಾಖಲೆ ಇದೆ. ಮೇಯರ್‌ಗೆ ಅಪಮಾನ ಮಾಡಿಲ್ಲ. ಒಳಗೆ ಕರೆದು ಆತಿಥ್ಯ ನೀಡಿದ್ದೇವೆ" ಎಂದು ಸ್ಪಷ್ಟಪಡಿಸಿದರು.

## ನಮ್ಮ ದೇಶದ ಸಂಸ್ಕೃತಿ, ಆಚಾರ, ವಿಚಾರಗಳು ಇಡೀ ವಿಶ್ವಕ್ಕೆ ಮಾದರಿ: ಶಾಸಕ ಬಾಲಚಂದ್ರ ಜಾರಕಿಹೊಳಿ

ಘಟಪ್ರಭಾ: ನಮ್ಮ ರಾಷ್ಟ್ರವು ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತಿರುವ ವಿಶ್ವದ ಏಕಮೇವ ರಾಷ್ಟ್ರವಾಗಿದೆ. ನೂರಾರು ಜಾತಿ-ಧರ್ಮಗಳಿದ್ದರೂ ಆಚರಣೆಗಳು ಮಾತ್ರ ಒಂದೇ ಎಂದು ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.



ಇಲ್ಲಿಗೆ ಸಮೀಪದ ಸಂಗನಕೇರಿ ಪಟ್ಟಣದ ಹನಮಂತ ದೇವರ ಕಾರ್ತಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಮ್ಮ ಭಾರತೀಯಆಚಾರ, ವಿಚಾರಗಳು ಇಡೀ ವಿಶ್ವಕ್ಕೆ ಮಾದರಿಯಾಗಿವೆ ಎಂದು ಹೇಳಿದರು.

ಅರಭಾವಿ ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಸೇರಿರುವ ಸಂಗನಕೇರಿ ಪಟ್ಟಣದ ಅಭಿವೃದ್ಧಿಗೆ ಕಳೆದ 20 ವರ್ಷಗಳಿಂದ ಸರ್ಕಾರದ ನಾನಾ ಯೋಜನೆಗಳನ್ನು ಅನುಷ್ಠಾನ ಮಾಡಿದ್ದೇನೆ. ಮುಂದೆಯೂ ಸಹ ಈ ಪಟ್ಟಣದ ಅಭಿವೃದ್ಧಿಗೆ ಇನ್ನೂ ಹಲವಾರು ಯೋಜನೆಗಳನ್ನು ಜಾರಿಗೊಳಿಸುವ ಚಿಂತನೆ ಇದೆ. ರಾಜ್ಯದಲ್ಲಿ ಈ ಹಿಂದೆ ನಮ್ಮ ಸರ್ಕಾರ ಆಡಳಿತದಲ್ಲಿದ್ದಾಗ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿರುವುದಾಗಿ ಅವರು ತಿಳಿಸಿದರು.

ಈಗಾಗಲೇ ಹಿಡಕಲ್ ಜಲಾಶಯದಲ್ಲಿ 34 ಟಿಎಂಸಿ ನೀರು ಸಂಗ್ರಹವಿರುವುದರಿಂದ ಮುಂದಿನ ಬೇಸಿಗೆಯ ಕಾಲದವರೆಗೂ ನೀರನ್ನು ಬಳಕೆ ಮಾಡಬಹುದಾಗಿದೆ. ಘಟಪ್ರಭಾ ನದಿ ತೀರದ ರೈತರು ಈಗಿನಿಂದಲೇ ನೀರನ್ನು ಮಿತವಾಗಿ ಬಳಕೆ ಮಾಡಬೇಕು. ದೇವರ ದಯೆಯಿಂದ ಇನ್ನೂ ಮಳೆಯಾದರೆ ರೈತರಿಗೆ ಮತ್ತಷ್ಟು ಖುಷಿ ತರುತ್ತದೆ. ಸಾರ್ವಜನಿಕರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಈಗಿನಿಂದಲೇ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾಗಿ ಅವರು ಹೇಳಿದರು.

ಇದೇ ಸಂದರ್ಭದಲ್ಲಿ ಶಾಸಕ ಹಾಗೂ ಕೆಎಂಎಫ್ ನಿರ್ದೇಶಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಹನಮಂತ ದೇವರ ಕಾರ್ತಿಕೋತ್ಸವ ಕಮೀಟಿಯಿಂದ ಸತ್ಕರಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಬಸವರಾಜ ಮಾಳೇದವರ, ಅರ್ಜುನ ಚಿಕ್ಕೋಡಿ, ವಿಠ್ಠಲ ಶಿಂಗೋಟಿ, ನಾಗಪ್ಪ ಮಾಳೇದವರ, ಬಿ.ಟಿ. ಸಂಪಗಾಂವಿ, ಭೀಮಶಿ ಮಾಳ್ಯಾಗೋಳ, ಮಲಗೌಡ ಮಾಳ್ಯಾಗೋಳ, ದೊಡ್ಡಪ್ಪ ಸಂಪಗಾಂವಿ, ಮುತ್ತೆಪ್ಪ ಗದಾಡಿ, ಬಸಪ್ಪ ಮಾಳ್ಯಾಗೋಳ, ಗಿರೆಪ್ಪ ಶಿಂಗೋಟಿ, ಯಲ್ಲಪ್ಪ ನಿಂಗ್ಯಾಗೋಳ, ಕಾರ್ತಿಕೋತ್ಸವ ಕಮೀಟಿಯ ಸದಸ್ಯರು, ಪ್ರಮುಖರು ಉಪಸ್ಥಿತರಿದ್ದರು.

## ಅಥಣಿಯಲ್ಲಿ ವಿದ್ಯುತ್ ತಗುಲಿ ತಂದೆ-ಮಗ ಸಾವು

ಬೆಳಗಾವಿ: ಬೋರವೆಲ್ ವಾಟರ್ ವಾಲ್ವ್ ತಿರುಗಿಸುವ ವೇಳೆ ವಿದ್ಯುತ್ ತಗುಲಿ ತಂದೆ-ಮಗ ದಾರುಣವಾಗಿ ಮೃತಪಟ್ಟಿರುವ ಘಟನೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಚಿಕ್ಕಟ್ಟಿ ಗ್ರಾಮದಲ್ಲಿ ನಡೆದಿದೆ.

ಮಲ್ಲಿಕಾರ್ಜುನ ಸದಾಶಿವ ಪೂಜಾರಿ (32), ಪ್ರೀತಮ್ ಮಲ್ಲಿಕಾರ್ಜುನ ಪೂಜಾರಿ (7) ಮೃತರು. ತಂದೆಗೆ ವಿದ್ಯುತ್ ತಗುಲಿದ್ದನ್ನು ನೋಡಿ ಮಗ ರಕ್ಷಣೆಗೆ ಬಂದಾಗ ಆತನಿಗೂ ವಿದ್ಯುತ್ ಪ್ರವಹಿಸಿದೆ, ಇದರಿಂದ ಸ್ಥಳದಲ್ಲಿ ತಂದೆ-ಮಗ ಕೊನೆಯುಸಿರೆಳೆದಿದ್ದಾರೆ. ಘಟನಾ ಸ್ಥಳಕ್ಕೆ ಅಥಣಿ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಸಂವಿಧಾನದ ಮೂಲ ಆಶಯ ಸಾಮಾನ್ಯರಿಗೆ ತಲುಪಲಿ: ಬಿ.ಜಿ. ಪಾಟೀಲ

ಹುಕ್ಕೇರಿ: ಭಾರತದ ಅಸ್ತಿತ್ವವೇ ಅಂಬೇಡ್ಕರ ರೂಪಿಸಿರುವ ಬಲಿಷ್ಠ ಸಂವಿಧಾನವಾಗಿದೆ. ಈ ಸಂವಿಧಾನದ ಮೂಲ ಆಶಯಗಳನ್ನು ಸಾಮಾನ್ಯ ಜನರಿಗೆ ತಲುಪಿಸುವ ಇಂದಿನ ತುರ್ತು ಅಗತ್ಯವಿದೆ ಸಂಕೇಶ್ವರ ಎಸ್.ಎಸ್ ಕಲಾ ಹಾಗೂ ಟಿಪಿ ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಬಿ.ಜಿ.ಪಾಟೀಲ ಅಭಿಪ್ರಾಯಪಟ್ಟರು.

ಪಟ್ಟಣದ ನ್ಯಾಯಾಲಯದ ಆವರಣದ ಇ-ಗ್ರಂಥಾಲಯದಲ್ಲಿ ಸೋಮವಾರ ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ, ಪೊಲೀಸ್, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ ಸಂವಿಧಾನ ದಿನಾಚರಣೆ ಕುರಿತ ಕಾನೂನು ಅರಿವು-ನೆರವು ಕಾರ್ಯಕ್ರಮದ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಭಾರತದಲ್ಲಿ ಸಂವಿಧಾನ ಇಲ್ಲದೇ ಇರುವುದನ್ನು




ಊಹಿಸಲಾಗದು. ಸದೃಢ ಭಾರತ ನಿರ್ಮಾಣಕ್ಕೆ ಭದ್ರಬುನಾದಿ ಎನ್ನುವಂತೆ ಅಂಬೇಡ್ಕರರು ವಿಶ್ವ ಶ್ರೇಷ್ಠ ಸಂವಿಧಾನ ಕೊಟ್ಟಿದ್ದಾರೆ. ದೂರದೃಷ್ಟಿಯಿಂದ ಸಂವಿಧಾನದಲ್ಲಿ ಸಮಾನತೆ, ಭ್ರಾತೃತ್ವ, ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಲಾಗಿದೆ.

ಇಂಥ ಅತ್ಯುತ್ತಮ ಸಂವಿಧಾನದ ಆಶಯಗಳ ಕುರಿತು ಪ್ರತಿಯೊಬ್ಬರಿಗೂ ಅರಿವು ಮೂಡಿಸುವ ಕಾರ್ಯಕ್ರಮ ರೂಪಿಸಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಿವಿಲ್ ನ್ಯಾಯಾಧೀಶ ಕೆ.ಎಸ್.ರೊಟ್ಟೇರ ಮಾತನಾಡಿ, ಅಂಬೇಡ್ಕರ ಅವರು ಹಲವು ದೇಶಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ ಅದರಲ್ಲಿನ ಸಕಾರಾತ್ಮಕ ವಿಚಾರಗಳನ್ನು ಮಾತ್ರ ಎತ್ತಿಕೊಂಡು ಭಾರತದ ಸಂವಿಧಾನ ರೂಪಿಸಿದ್ದಾರೆ. ಆದರೆ, ಇಂದು ಸಂವಿಧಾನದ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುವ ಯತ್ನ ನಡೆದಿದೆ. ಸಂವಿಧಾನ ಮತ್ತು ಕಾನೂನು ವಿರೋಧಿ ಕುಕೃತ್ಯಗಳು ನಡೆಯುತ್ತಿರುವುದು ದು:ಖದ ಸಂಗತಿ ಎಂದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ರಾಜು ಚೌಗಲಾ ಅಧ್ಯಕ್ಷತೆ ವಹಿಸಿದ್ದರು. ಸಿವಿಲ್ ನ್ಯಾಯಾಧೀಶ ಕೆ.ಅಂಬಣ್ಣಾ, ಅಪರ ಸರ್ಕಾರಿ ನ್ಯಾಯವಾದಿ ಅನಿಲ ಕರೋಶಿ, ಸಹಾಯಕ ಸರ್ಕಾರಿ ಅಭಿಯೋಜಕ ಬಸವರಾಜ ಓನಿ, ಹಿರಿಯ ನ್ಯಾಯವಾದಿಗಳಾದ ಪಿ.ಆರ್.ಚೌಗಲಾ, ಪ್ರಕಾಶ ಮುತಾಲಿಕ, ರಾಮಚಂದ್ರ ಜೋಶಿ, ಎ.ಎಂ.ಹ್ಯಾಟಗೋಳ, ಕೆ.ಎಲ್.ಜಿನರಾಳಿ, ಡಿ.ಕೆ.ಅವರಗೋಳ, ಭೀಮಸೇನ ಭಾಗಿ, ಅನೀಸ್ ವಂಟಮೂರಿ, ಬಿ.ಎಂ.ಜಿನರಾಳಿ, ಪಿ.ಎಸ್.ಪಾಟೀಲ, ಕೆ.ಪಿ.ಶಿರಗಾಂವಕರ, ಶಿವಾನಂದ ಮರಿನಾಯಿಕ, ಪಿಎಸ್ಐ ಅಭಿಜೀತ ಅಕ್ಕತಂಗೇರಹಾಳ ಮತ್ತಿತರರು ಉಪಸ್ಥಿತರಿದ್ದರು. ಎಸ್.ಐ.ದೇಮಣ್ಣವರ ಸ್ವಾಗತಿಸಿದರು. ಎ.ಬಿ.ತೊದಲ ನಿರೂಪಿಸಿದರು. ಆಶಾ ಸಿಂಗಾಡಿ ವಂದಿಸಿದರು.

## ಪೊಲೀಸರ ಕೈಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ರೌಡಿಶೀಟರ್ ಕಾಲಿಗೆ ಗುಂಡು ಹಾರಿಸಿದ ಇನ್ಸ್ ಪೆಕ್ಟರ್



ಹುಬ್ಬಳ್ಳಿ: ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಮೇಲೆ ಹಲ್ಲೆ ಮಾಡಿ ತಪ್ಪಿಸಿಕೊಳ್ಳಲು ಯತ್ನಿಸಿದ ಪಾತಕಿಯ ಕಾಲಿಗೆ ಗುಂಡು ಹಾರಿಸಿ ಬಂಧಿಸರುವ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಸ್ಥಳ ಮಹಜರು ನಡೆಸುವ ವೇಳೆ ರೌಡಿ ಸತೀಶ್ ಗೋನಾ ಇನ್ಸ್ ಪೆಕ್ಟರ್ ವಿನೋದ್ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಪ್ರಯತ್ನಿಸಿದ್ದ ರೌಡಿಶೀಟರ್ ಸತೀಶ ಗೌನಾ ಮೇಲೆ ಕೊಲೆ, ಕೊಲೆಯತ್ನ, ಮನೆಗೆ ಬೆಂಕಿ ಹಚ್ಚಿರುವ ಪ್ರಕರಣ ಸೇರಿದಂತೆ 5 ಕ್ಕೂ ಹೆಚ್ಚು ದೂರುಗಳಿತ್ತು. ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಆತನ ವಿರುದ್ಧ ದೂರು ದಾಖಲಾಗಿತ್ತು. ಕೊಲೆಯತ್ನ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಪೊಲೀಸರು ಆತನನ್ನು ಮಹಜರಿಗೆ ಕರೆದೊಯ್ದಿದ್ದಾಗ ಇನ್ಸ್ ಪೆಕ್ಟರ್ ವಿನೋದ್ ಅವರ ಮೇಲೆ ಹಲ್ಲೆ ನಡೆಸಿದ್ದ. ಆಗ ಇನ್ಸ್ ಪೆಕ್ಟರ್ ರಫೀಕ್ ಎರಡು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗುವಂತೆ ಎಚ್ಚರಿಕೆ ನೀಡಿದ್ದರು. ಆದರೆ ಆತ ತನ್ನ ಹುಚ್ಚಾಟ ಮುಂದುವರೆಸಿದಾಗ ಕಾಲಿಗೆ ಗುಂಡು ಹಾರಿಸಿದ್ದಾರೆ. ಶನಿವಾರ ರಾತ್ರಿ ಗದಗ ರಸ್ತೆಯ ರೈಲ್ವೇ ಬ್ರಿಡ್ಜ್ ಬಳಿ ಕೊಲೆ ಯತ್ನಕ್ಕೆ ಸಂಚು ರೂಪಿಸಿ ಕುಳಿತಿದ್ದ ರೌಡಿ ಸತೀಶನನ್ನು ಪೊಲೀಸರು ಬಂಧಿಸಿದ್ದರು.

## ಬೆಳಗಾವಿ: ಚಲಿಸುತ್ತಿದ್ದ ಬಸ್‌ನಿಂದ ಕೆಳಗೆ ಬಿದ್ದು ವಿದ್ಯಾರ್ಥಿನಿಗೆ ಗಂಭೀರ ಗಾಯ



ಬೆಳಗಾವಿ: ಚಲಿಸುತ್ತಿದ್ದ ಬಸ್‌ನಿಂದ ಕೆಳಗೆ ಇಳಿಯಲು ಹೋಗಿ ಬಿದ್ದು ವಿದ್ಯಾರ್ಥಿನಿ ತಲೆಗೆ ಗಂಭೀರ ಗಾಯವಾದ ಘಟನೆ ಬೆಳಗಾವಿ ಜಿಲ್ಲೆ ಚಿಕ್ಕೋಡಿಯ ಅಂಬೇಡ್ಕರ್ ವೃತ್ತದ ಬಳಿ ನಡೆದಿದೆ.

ರಾಯಬಾಗದಿಂದ ಚಿಕ್ಕೋಡಿಗೆ ಆಗಮಿಸುತ್ತಿದ್ದ ವೇಳೆ ನಂದಿಕುರಳಿ ಗ್ರಾಮದ ಸಂಜನಾ ದತ್ತವಾಡೆ ಎನ್ನುವ ವಿದ್ಯಾರ್ಥಿನಿಗೆ ಗಂಭೀರ ಗಾಯವಾಗಿದೆ. ವಿದ್ಯಾರ್ಥಿನಿ ಬಸ್ ನಿಂದ ಕೆಳಗೆ ಇಳಿಯುವ ದೃಶ್ಯ ಸಿಸಿ ಕ್ಯಾಮೆರಾದದಲ್ಲಿ ಸೆರೆಯಾಗಿದೆ. ಸದ್ಯ ಚಿಕ್ಕೋಡಿ ತಾಲೂಕು ಆಸ್ಪತ್ರೆಯಲ್ಲಿ ವಿದ್ಯಾರ್ಥಿನಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ವಿದ್ಯಾರ್ಥಿನಿ ತಲೆಗೆ ಗಂಭೀರ ಗಾಯ ಹಿನ್ನೆಲೆ ಬೆಳಗಾವಿ ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ. ಚಿಕ್ಕೋಡಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## 10ನೇ ಸತೀಶ ಪ್ರತಿಭಾ ಪುರಸ್ಕಾರ; ವಿಜೇತರಿಗೆ ಬಹುಮಾನ ವಿತರಣೆ

ಬೆಳಗಾವಿ: ಸತೀಶ್ ಜಾರಕಿಹೊಳಿ ಫೌಂಡೇಶನ್ ವತಿಯಿಂದ ಹುಕ್ಕೇರಿ ತಾಲೂಕು ಯಮಕನಮರಡಿಯಲ್ಲಿ ಎರಡು ದಿನಗಳ ಕಾಲ ನಡೆದ ಸತೀಶ್ ಪ್ರತಿಭಾ ಪುರಸ್ಕಾರ ಸಾಂಸ್ಕೃತಿಕ ಲೋಕವೇ ಸೃಷ್ಟಿಯಾದಂತಾಯಿತು.

ಇಲ್ಲಿನ ಎನ್‌ಎಸ್‌ಎಫ್ ಶಾಲಾ ಆವರಣದಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 10ನೇ ಸತೀಶ್ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಮಾರಂಭ ಎಲ್ಲರ ಹುಬ್ಬೇರುವಂತೆ ಮಾಡಿತು. ಕಾರಣ ಪ್ರಾಥಮಿಕ ಶಾಲೆ ಮಕ್ಕಳಿಂದ ಆರಂಭವಾದ ಸಮಾರಂಭ ನೋಡುವುದಕ್ಕೆ ಸೊಗಸಾಗಿತ್ತು. ಮೊದಲಿಗೆ ಮಕ್ಕಳಿಂದ ಗಾಯನ, ಜಾನಪದ ಗಾಯನ, ಪ್ರೌಢ ಶಾಲಾ ಮಕ್ಕಳ ಗಾಯನ, ಜಾನಪದ ಗಾಯನ, ಹಾಗೂ ಕಾಲೇಜ ವಿದ್ಯಾರ್ಥಿಗಳ ಗಾಯನಗಳು ನಡೆದವು. ಕೊನೆಗೆ ಸ್ಪರ್ಧೆ ವಿಜೇತರಿಗೆ ಬಹುಮಾನ ನೀಡುವ ಕಾರ್ಯಕ್ರಮ ನಡೆಯಿತು.

ಪ್ರೌಢ ಶಾಲೆ ವಿಭಾಗದ ಸಾಮೂಹಿಕ ನೃತ್ಯ ಸ್ಪರ್ಧೆ: ಶಿರಢಾಣ ಡಾ. ಗಂಗಾದರ ಇಂಗ್ಲಿಷ್ ಮಾಧ್ಯಮ ಶಾಲೆ ವಸತಿ ಪೌಢಶಾಲೆ ಸ್ಫೂರ್ತಿ ಪತ್ತಾರ ಸಂಗಡಿಗರು ಪ್ರಥಮ ಸ್ಥಾನ ಪಡೆದು 50 ಸಾವಿರ ರೂ. ಬಹುಮಾನ ಪಡೆದಿದ್ದಾರೆ.



ಗುಡಸ ಬಿ. ಎಂ. ಅಮ್ಮಣಗಿ ಪೌಢ ಶಾಲೆ ಬಸವರಾಜ ಕರಿಗಾರ ಹಾಗೂ ಸಂಗಡಿಗರು ದ್ವಿತೀಯ ಸ್ಥಾನ ಪಡೆದು 40 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ಸಂಕೇಶ್ವರ ಅಕ್ಕಮಹಾದೇವಿ ಕನ್ಯಾ ಶಾಲೆ ಅಕ್ಷರಾ ಕರನಿಂಗ ಹಾಗೂ ಸಂಗಡಿಗರು ತೃತೀಯ ಸ್ಥಾನ ಪಡೆದು 30 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ನಿಡಸೋಸಿ ಎಸ್‌ಜೆಪಿಎನ್ ಸಿಬಿಎಸ್‌ಇ ಪೌಢ ಶಾಲೆ ಪ್ರೀತಿ ಪಾಟೀಲ ಹಾಗೂ ಸಂಗಡಿಗರು, ಗುಡಗನಹಟ್ಟಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕವಿತಾ ಖೋತ ಹಾಗೂ ಸಂಗಡಿಗರು ಹಾಗೂ ಯಮನಕನಮರಡಿಯ ಎನ್ ಎಸ್ ಎಫ್ ಶಾಲೆ ಶೀಧರ ಮೀನಾಪ್ಪಗೋಳ ಹಾಗೂ ಸಂಗಡಿಗರು ಸಮಾಧಾನಕರ ತಲಾ 10 ಸಾವಿರ ರೂ. ಬಹುಮಾನ ಪಡೆದಿದ್ದಾರೆ.

ಪ್ರಾಥಮಿಕ ವಿಭಾಗದ ಜಾನಪದ ಸಮೂಹ ನೃತ್ಯ ಸ್ಪರ್ಧೆ: ಗೋಟೂರು ಸರ್ಕಾರಿ ಪ್ರಾಥಮಿಕ ಕನ್ನಡ ಶಾಲೆ ಶ್ರೀದೇವಿ ಕಮತೆ ಹಾಗೂ ಸಂಗಡಿಗರು ಪ್ರಥಮ ಸ್ಥಾನ ಪಡೆದು 50 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ಹಟ್ಟಿಆಲೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೀರ್ತಿ ಚೆನ್ನವರ ಹಾಗೂ ಸಂಗಡಿಗರು ದ್ವಿತೀಯ ಸ್ಥಾನ ಪಡೆದು 40 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ನಿಡಸೋಸಿ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯ ಸೃಷ್ಠಿ ಶಿರಗಾಂವಿ ಹಾಗೂ ಸಂಗಡಿಗರು ತೃತೀಯ ಸ್ಥಾನ ಪಡೆದು 30 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ಶಿರಗಾಂವ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯ ವೇದ ಬೇವಿನಕಟ್ಟಿ ಹಾಗೂ ಸಂಗಡಿಗರು, ಗುಡಗನಹಟ್ಟಿ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯ ರೇಣುಕಾ ಖೋತ ಹಾಗೂ ಸಂಗಡಿಗರು ಹಾಗೂ ಮದಿಹಳ್ಳಿ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಅಕ್ಷತಾ ಪೂಜೇರಿ ಹಾಗೂ ಸಂಘಡಿಗರು ಸಮಾಧಾನಕರ ತಲಾ 10 ಸಾವಿರ ರೂ. ಬಹುಮಾನ ಪಡೆದಿದ್ದಾರೆ.

ಪದವಿ ಕಾಲೇಜ ವಿಭಾಗದ ಜಾನಪದ ಗಾಯನ ಸ್ಪರ್ಧೆ: ಹುಕ್ಕೇರಿ ಎಸ್ ಎಸ್ ಎನ್ . ಕಾಲೇಜ ವಿದ್ಯಾರ್ಥಿನಿ ಅಂಕಿತಾ ಕುಗಟೋಳಿ ಪ್ರಥಮ ಸ್ಥಾನ ಪಡೆದು15 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ನಿಡಸೋಸಿ ಎಸ್ .ಜೆ.ಪಿ. ಎಸ್ ಕಾಲೇಜ ವಿದ್ಯಾರ್ಥಿ ಪ್ರಸನ್ ಹಣಗಡಕರ ದ್ವಿತಿಯ ಸ್ಥಾನ ಪಡೆದು 10 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ಪಾಶ್ಚಾಪೂರ ಸರಕಾರಿ ಪ್ರಥಮ ಕಾಲೇಜ ವಿದ್ಯಾರ್ಥಿನಿ ಪ್ರೇಮಾ ವಾಗನ್ನವರ ತೃತೀಯ ಸ್ಥಾನ ಪಡೆದು 7 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ಹುಕ್ಕೇರಿ ಎಸ್.ಕೆ ಪದವಿಪೂರ್ವ ಕಾಲೇಜ ವಿದ್ಯಾರ್ಥಿನಿ ರಾಣಿ ಪತ್ತಾರ , ಉ-ಖಾನಾಪೂರ ಸರಕಾರಿ ಪದವಿಪೂರ್ವ ಕಾಲೇಜ ವಿದ್ಯಾರ್ಥಿನಿ ನಿಕಿತಾ ಹತ್ತರಕಿ ಸಮಾಧಾನಕರ ತಲಾ 2 ಸಾವಿರ ರೂ. ಬಹುಮಾನ ಪಡೆದಿದ್ದಾರೆ.

ಕಾಲೇಜು ಸಮೂಹ ನೃತ್ಯ ಸ್ಪರ್ಧೆ: ಸಂಕೇಶ್ವರ ಎಲ್ ಕೆ.ಖೋತ ಕಾಲೇಜ ವಿದ್ಯಾರ್ಥಿನಿ ಅಶ್ವಿನಿ ಕೌಂಡ ಹಾಗೂ ಸಂಗಡಿಗರು ಪ್ರಥಮ ಸ್ಥಾನ ಪಡೆದು 50 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ಯಮನಕನಮರಡಿ ಶ್ರೀ ಗುರುರಾಚೋಟಿ ಸರ್ಕಾರಿ ಸ್ವತಂತ್ರ ಕಾಲೇಜ ವಿದ್ಯಾರ್ಥಿನಿ ಶ್ರೀನಿಧಿ ಮಡಿವಾಳ ಹಾಗೂ ಸಂಗಡಿಗರು ದ್ವಿತೀಯ ಸ್ಥಾನ ಪಡೆದು 40 ಸಾವಿರ ರೂ. ಬಹುಮಾನ ಪಡೆದಿದ್ದಾರೆ. ನಿಡಸೋಶಿ ಬಿಎಸ್ . ಎ ವಾಣಿಜ್ಯ ಪದವಿ ಕಾಲೇಜ ವಿದ್ಯಾರ್ಥಿನಿ ಸಾಕ್ಷಿ ಮಲಗರೆ ಹಾಗೂ ಸಂಗಡಿಗರು ತೃತೀಯ ಸ್ಥಾನ ಪಡೆದು 30 ಸಾವಿರ ರೂ. ಬಹುಮಾನ ಪಡೆದಿದ್ದಾರೆ.

ನಿಡಸೋಶಿ ಎಸ್.ಜೆ.ಪಿ.ಎನ್ ವಿಜ್ಞಾನ ಕಾಲೇಜ ವಿದ್ಯಾರ್ಥಿನಿ ಪ್ರಿಯಂಕಾ ಮಡಿವಾಳ ಹಾಗೂ ಸಂಗಡಿಗರು, ಸಂಕೇಶ್ವರ ಕಲಾ.ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜ ವಿದ್ಯಾರ್ಥಿನಿ ಪದ್ಮಜಾ ಸಂಕೇಶ್ವರಿ ಹಾಗೂ ಸಂಗಡಿಗರು ಸಮಾಧಾನಕರ ತಲಾ 10 ಸಾವಿರ ರೂ. ಬಹುಮಾನ ಪಡೆದಿದ್ದಾರೆ.

## ರನ್ನಿಂಗ್ ರೇಸ್‌ನಲ್ಲಿ ಬಹುಮಾನ ಸಿಗದಿದ್ದಕ್ಕೆ ವಿದ್ಯಾರ್ಥಿನಿ ಆತ್ಮಹತ್ಯೆ



ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಬಹುಮಾನ ಸಿಗದ ವಿಚಾರಕ್ಕೆ ಖಿನ್ನತೆಗೊಳಗಾದ ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿನಿ ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಸಂಪ್ಯದಲ್ಲಿ ನಡೆದಿದೆ.

ನಿಶಾ (17) ಸಾವನ್ನಪ್ಪಿದ ವಿದ್ಯಾರ್ಥಿನಿ. ಈಕೆ ಖಾಸಗಿ ಕಾಲೇಜಿನಲ್ಲಿ ಪಿಯುಸಿ ವ್ಯಾಸಂಗ ಮಾಡುತ್ತಿದ್ದು, ಕಳೆದ ಒಂದು ವಾರದ ಹಿಂದೆ ವಿಷ ಸೇವಿಸಿದ್ದಳು. ಇದೀಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ.

ಕಳೆದ ಎರಡು ವಾರಗಳ ಹಿಂದೆ ಬಿಹಾರದಲ್ಲಿ ರಾಷ್ಟ್ರಮಟ್ಟದ ಕ್ರೀಡಾಕೂಟ ನಡೆದಿದ್ದು, ನಿಶಾ ರನ್ನಿಂಗ್ ರೇಸ್‌ನಲ್ಲಿ ಭಾಗವಹಿಸಿದ್ದರು. ಅದರಲ್ಲಿ ಬಹುಮಾನ ಸಿಗದಿದ್ದಕ್ಕೆ ನಿಶಾ ಬೇಸರಗೊಂಡಿದ್ದಾಳೆ. ಬಳಿಕ ಖಿನ್ನತೆಗೊಳಗಾಗಿ ತೋಟಕ್ಕೆ ಸಿಂಪಡಿಸುವ ಕೀಟನಾಶಕವನ್ನು ಸೇವಿಸಿದ್ದು, ತೀವ್ರ ವಾಂತಿ ಬಂದ ಕಾರಣಕ್ಕೆ ಮನೆಯವರು ವಿಚಾರಿಸಿದಾಗ ಕೀಟನಾಶಕ ಸೇವಿಸಿದ ವಿಚಾರ ಬೆಳಕಿಗೆ ಬಂದಿದೆ.

ವಿಚಾರ ತಿಳಿದ ಕೂಡಲೇ ಮನೆಯವರು ಆಕೆಯನ್ನು ಪುತ್ತೂರಿನ ಆಸ್ಪತ್ರೆಗೆ ದಾಖಲಿಸಿದ್ದರು. ಪುತ್ತೂರಿನಿಂದ ಮಂಗಳೂರಿಗೆ ಕೊಂಡೊಯ್ಯುವಂತೆ ವೈದ್ಯರು ತಿಳಿಸಿದ್ದರು. ಕಳೆದ ಒಂದುವಾರದಿಂದ ನಿಶಾ ಮಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಳು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದು ಕೊನೆಯುಸಿರೆಳೆದಿದ್ದಾಳೆ. ಈ ಕುರಿತು ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಲಾಗಿದೆ.

## ವೆನ್ಸರ್ ಅವರ ಆರ್ ಎಕೆ ಫೆಲಿಸಿಟಿಯನ್ನು ಬಿಡುಗಡೆ ಮಾಡಿದ ನಟ ಶಿವರಾಜ್ ಕುಮಾರ್

ಬೆಂಗಳೂರು: ಪ್ರತಿಯೊಬ್ಬ ವ್ಯಕ್ತಿಯ ಅಗತ್ಯತೆಗಳನ್ನು ಪೂರೈಸುವ ಜಾಗವನ್ನು ರಚಿಸುವಲ್ಲಿ ಪರಿಣತಿ ಹೊಂದಿರುವ ವೆನ್ಸರ್ ಪ್ರಾಜೆಕ್ಟ್ಸ್ ಕಂಪನಿಯು ಬೆಂಗಳೂರಿನ ದೇವನಹಳ್ಳಿಯಲ್ಲಿ ವೆನ್ಸರ್ ನಿಂದ ಆರ್ ಎಕೆ ಫೆಲಿಸಿಟಿಯನ್ನು ಪ್ರಾರಂಭಿಸುವುದಾಗಿ ಘೋಷಿಸಿತು. ಖ್ಯಾತ ನಟ ಶಿವರಾಜ್ ಕುಮಾರ್ ಅವರು ಇದನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಜೆ. ರಾಮಾಂಜೆನೇಯುಲು, ಎಂಆರ್, ಹರ್ಷ ಕಂಚಾರ್ಲ, ದಿವಾಕರ್ ನರಸಿಂಹನ್, ಎಂ.ಆರ್. ಡಿ ಬ್ರಹ್ಮಾನಂದಂ ಅವರು ಉಪಸ್ಥಿತರಿದ್ದರು.

ಇನ್ನು ವೆನ್ಸರ್ ಪ್ರಾಜೆಕ್ಟ್ ಗಳ ಬ್ರಾಂಡ್ ಅಂಬಾಸಿಡರ್ ಆಗಿರುವ ನಟ ಶಿವರಾಜ್ ಕುಮಾರ್, ಜನರ ಸುತ್ತ ಮತ್ತು ಅವರು ಬಯಸಿದ ರೀತಿಯಲ್ಲಿ ವಾಸಿಸುವ ಸ್ಥಳಗಳನ್ನು ಸೃಷ್ಟಿಸಲು ಕಂಪನಿಯ ಪ್ರಯತ್ನಗಳನ್ನು ಶ್ಲಾಘಿಸಿದರು.

ಇನ್ನು RAK ಫೆಲಿಸಿಟಿಯ ಪ್ರಾರಂಭದ ಕುರಿತು ಮಾತನಾಡಿದ ಎಂಆರ್, ಹರ್ಷ ಕಂಚಾರ್ಲ, "ಆರ್ ಕೆ ಫೆಲಿಸಿಟಿಯು ವೆನ್ಸರ್ ನ ನಿರಂತರ ಪ್ರಯತ್ನಗಳಿಗೆ ಅನುಗುಣವಾಗಿದೆ, ನಮ್ಮ ಖರೀದಿದಾರರಿಗೆ ಅವರಿಗೆ ಅಗತ್ಯವಿರುವ ಸ್ಥಳವನ್ನು ಅವರಿಗೆ ಆರಾಮದಾಯಕವಾದ ಬೆಲೆಯಲ್ಲಿ ನೀಡುತ್ತೇವೆ. ವೆನ್ಸರ್ ಅವರ RAK ಫೆಲಿಸಿಟಿ ಎಲ್ಲವನ್ನೂ ಹೊಂದಿದೆ. ಹಲವಾರು ಐಟಿ




ಪಾರ್ಕ್ ಗಳು,ಮುಖ್ಯವಾಗಿ ವಿಮಾನ ನಿಲ್ದಾಣವು ಇಡೀ ವಲಯವನ್ನು ಮಹತ್ವಾಕಾಂಕ್ಷೆಯ ವಸತಿ ಮತ್ತು ಹೂಡಿಕೆಯ ತಾಣವನ್ನಾಗಿ ಮಾಡಿದೆ. ಮತ್ತು ಉತ್ತಮ ಶಾಲೆಗಳು, ಕಾಲೇಜುಗಳು ಮತ್ತು ಮನರಂಜನಾ ಸ್ಥಳಗಳೊಂದಿಗೆ, ಇದು ಉತ್ತಮ ಜೀವನಶೈಲಿಯನ್ನು ನಿರ್ಮಿಸುವ ಅವಕಾಶವಾಗಿದೆ ಎಂದು ಭರವಸೆ ನೀಡುತ್ತದೆ" ಎಂದರು.

ವೆನ್ಸರ್ ಅವರ RAK ಫೆಲಿಸಿಟಿ ಪ್ರಕೃತಿಯಿಂದ ಸುತ್ತುವರಿದ ಸುಂದರವಾದ ವಿಲ್ಲಾ ಪ್ಲಾಟ್ ಸಮುದಾಯವಾಗಿದೆ ಮತ್ತು ಸಂತೋಷಕರ ಸೌಕರ್ಯಗಳನ್ನು ನೀಡುತ್ತದೆ. ಯೋಜನೆಯ I ಹಂತವು 15 ಎಕರೆ ಭೂಮಿಯಲ್ಲಿ ಹರಡಿರುವ 296 ವಸತಿ ಪ್ಲಾಟ್ ಗಳನ್ನು ಒಳಗೊಂಡಿದೆ.

ಈ ಸ್ಥಳವು ನಗರದಿಂದ ಸ್ವಲ್ಪ ದೂರದಲ್ಲಿದೆ, ಹಾಗೇ, ವೆನ್ಸರ್ ಆರ್ ಕೆ ಫೆಲಿಸಿಟ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೇವಲ 10 ನಿಮಿಷಗಳ ದೂರದಲ್ಲಿದೆ. ಯೋಜನೆಯು ಕಿಡ್ಸ್ ಪ್ಲೇ ಏರಿಯಾ, ಜಾಗಿಂಗ್ ಟ್ರ್ಯಾಕ್, ಯೋಗ ಡೆಕ್, ಸೀನಿಯರ್ ಸಿಟಿಜನ್ ಹೆವನ್, ಹೊರಾಂಗಣ ಜಿಮ್, ಓಪನ್ ಲಾನ್ ಏರಿಯಾ, ಸ್ವಿಂಗ್ ಪಾರ್ಕ್, 24x7 CCTV, ಅಂಡರ್ ಗ್ರೌಂಡ್ ರೀಚಾರ್ಜಿಂಗ್ ಮತ್ತು ಸೈಕ್ಲಿಂಗ್ ಟ್ರ್ಯಾಕ್ ನಂತಹ 30+ ಅಲ್ಟ್ರಾ-ಐಷಾರಾಮಿ ಸೌಕರ್ಯಗಳೊಂದಿಗೆ ಕೂಡಿದೆ.

ವೆನ್ಸರ್ನ RAK ಫೆಲಿಸಿಟಿಯು ಹಂತ I ರಲ್ಲಿ 1200 ರಿಂದ 2400 ಚದರ ಅಡಿಗಳವರೆಗಿನ ವಸತಿ ಪ್ಲಾಟ್ ಗಳನ್ನು ನೀಡುತ್ತದೆ ಮತ್ತು ಬೆಲೆಗಳು INR 4955/-.Sqft ನಿಂದ ಪ್ರಾರಂಭವಾಗುತ್ತವೆ.

# ಪ್ರಧಾನಿ ನರೇಂದ್ರ ಮೋದಿಯವರಿಂದ ಭಾರತಕ್ಕೆ ವಿಶ್ವಮಾನ್ಯತೆ

## ಕೇಂದ್ರದಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬರಲು ಕಾರ್ಯಕರ್ತರು ಈಗಿಂದಲೇ ಸಜ್ಜಾಗಿ: ಶಾಸಕ ಬಾಲಚಂದ್ರ ಜಾರಕಿಹೊಳಿ

ಮೂಡಲಗಿ: ಬರಲಿರುವ ಎಪ್ರೀಲ್-ಮೇ ತಿಂಗಳಲ್ಲಿ ಜರುಗಲಿರುವ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿಯವರು ಮತ್ತೊಮ್ಮೆ ಭಾರತದ ಪ್ರಧಾನಿಯಾಗಲು ಕಾರ್ಯಕರ್ತರು ಈಗಿನಿಂದಲೇ ಚುನಾವಣೆಯ ಸಿದ್ಧತೆಯಲ್ಲಿ ತೊಡಗಬೇಕು. ಈ ಮೂಲಕ ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರಲು ಶ್ರಮಿಸಬೇಕು ಎಂದು ಶಾಸಕ, ಕೆಎಂಎಫ್ ನಿರ್ದೇಶಕ ಬಾಲಚಂದ್ರ ಜಾರಕಿಹೊಳಿ ಅವರು ಕಾರ್ಯಕರ್ತರಿಗೆ ಕರೆ ನೀಡಿದರು.

ಸೋಮವಾರದಂದು ತಾಲೂಕಿನ ಅರಭಾವಿ ವ್ಯಾಪ್ತಿಯ ಗೋಕಾಕ ಸಪ್ಲಾಯರ್ಸ್ ಕಲ್ಯಾಣ ಮಂಟಪದಲ್ಲಿ ಬಿಜೆಪಿಯಿಂದ ಜರುಗಿದ ಜಿಲ್ಲಾ ಮಟ್ಟದ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಪ್ರ-ಶಿಕ್ಷಣ ವರ್ಗದ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಿಂದಾಗಿ ಇಡೀ ವಿಶ್ವ ಮಟ್ಟದಲ್ಲಿ ಭಾರತಕ್ಕೆ ಜನಮನ್ನಣೆ ದೊರೆತಿದೆ ಎಂದು ಪ್ರಧಾನಿಗಳ ಕಾರ್ಯಗಳನ್ನು ಶ್ಲಾಘಿಸಿದರು.

ಕೇಂದ್ರದಲ್ಲಿ ನಮ್ಮ ಸರ್ಕಾರ ರಚನೆಯಾಗಬೇಕು. ಈ ನಿಟ್ಟಿನಲ್ಲಿ ಕಾರ್ಯಕರ್ತರು ಕೇಂದ್ರದ ಹಾಗೂ ರಾಜ್ಯದಲ್ಲಿ ನಮ್ಮ ಹಿಂದಿನ ಸರ್ಕಾರದ ಸಾಧನೆಗಳನ್ನು ಕಾರ್ಯಕರ್ತರು ಮತದಾರರ ಮನೆ ಮನೆಗೆ ತಲುಪಿಸುವ ಕಾರ್ಯಗಳನ್ನು ಕೈಗೊಳ್ಳಬೇಕು. ಬರುವ ತಾಪಂ ಹಾಗೂ ಜಿಪಂ ಚುನಾವಣೆಗಳಲ್ಲಿಯೂ ನಮ್ಮ ಪಕ್ಷದ ಅಭ್ಯರ್ಥಿಗಳು ಜಯಗಳಿಸಲು ಕಾರ್ಯಕರ್ತರು ದುಡಿಯಬೇಕು ಎಂದು ಹೇಳಿದರು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತದಾರರು ನೀಡಿರುವ ತೀರ್ಪನ್ನು ಗೌರವಪೂರ್ವಕವಾಗಿ ಸ್ವೀಕರಿಸುತ್ತೇವೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕಿತ್ತು. ಆದರೆ ಮತದಾರರು ನಮ್ಮ ಬದಲಾಗಿ ಬೇರೊಂದು ಪಕ್ಷವನ್ನು ಅಧಿಕಾರಕ್ಕೆ ತಂದರು. ನಮ್ಮ ಸರ್ಕಾರವಿದ್ದಾಗ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿತ್ತು.

ಆದರೀಗ ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.




ಪ್ರತಿಯೊಬ್ಬ ಭಾರತೀಯನ ಕನಸಾಗಿರುವ ಅಯೋಧ್ಯೆಯ ರಾಮ ಮಂದಿರವು ಬರುವ ಜನೇವರಿ 22 ರಂದು ಲೋಕಾರ್ಪಣೆಗೊಳ್ಳಲಿದೆ. ಈ ಮೂಲಕ ನಾವು ಜನತೆಗೆ ನೀಡಿರುವ ಎಲ್ಲ ಆಶ್ವಾಸನೆಗಳನ್ನು ಈಡೇರಿಸುತ್ತಿದ್ದೇವೆ. ಪ್ರಧಾನಿಗಳ ದೂರದೃಷ್ಟಿಯ ನಾಯಕತ್ವದಿಂದ ನಮ್ಮ ದೇಶವು ವಿಶ್ವಮಾನ್ಯವಾಗಿ ಬೆಳೆಯುತ್ತಿದೆ. ಜೊತೆಗೆ ನರೇಂದ್ರ ಮೋದಿಯವರು ಮತ್ತೊಮ್ಮೆ ಈ ದೇಶದ ಪ್ರಧಾನಿಯಾಗಬೇಕೆಂಬುದು ಕೋಟ್ಯಾಂತರ ಜನರ ಆಶಯವಾಗಿದೆ ಎಂದು ತಿಳಿಸಿದರು.

ಬಿಜೆಪಿಯು ಅತೀ ಶಿಸ್ತಿನ ಹಾಗೂ ಸಂಘಟನಾತ್ಮಕ ಗುಣಗಳನ್ನು ಮೈಗೂಡಿಸಿಕೊಂಡಿರುವ ವಿಶ್ವದ ಅತೀ ದೊಡ್ಡ ಪಕ್ಷವಾಗಿದೆ. ನಮ್ಮ ಪಕ್ಷದಲ್ಲಿ ಕಾರ್ಯಕರ್ತರಿಗಿರುವ ಮನ್ನಣೆ ಯಾವ ಪಕ್ಷದಲ್ಲಿಯೂ ಇಲ್ಲ. ಹೀಗಾಗಿ ಕಾರ್ಯಕರ್ತರಿಗೆ ಸಕಲ ಗೌರವ ನೀಡುತ್ತಿರುವ ಬಿಜೆಪಿಯನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತರಬೇಕು.

ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಜನರ ಕಲ್ಯಾಣಕ್ಕಾಗಿ ಮೋದಿಯವರು ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿಯಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ರಾಜ್ಯ ಪ್ರಶಿಕ್ಷಣ ಪ್ರಕೋಷ್ಠ ಸಂಚಾಲಕ ಹಾಗೂ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ, ವಿಭಾಗ ಪ್ರಭಾರಿ ಚಂದ್ರಶೇಖರ ಕವಟಗಿ, ವಿಭಾಗ ಸಂಘಟನಾ ಪ್ರಧಾನ ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ, ವಿಭಾಗ ಸಹ-ಸಂಘಟನಾ ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ, ಅರಭಾವಿ ಮಂಡಲ ಅಧ್ಯಕ್ಷ ಮಹಾದೇವ ಶೆಕ್ಕಿ, ಗೋಕಾಕ ಗ್ರಾಮೀಣ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುಭಾಸ ಪಾಟೀಲ ಸ್ವಾಗತಿಸಿದರು. ರಾಜ್ಯ ಪ್ರಶಿಕ್ಷಣ ಪ್ರಕೋಷ್ಠದ ಸದಸ್ಯ ಶಶಿಕಾಂತ ವಿಶ್ವಬ್ರಾಹ್ಮಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಮಾಧ್ಯಮ ಸಂಚಾಲಕ ಎಫ್.ಎಸ್. ಸಿದ್ದನಗೌಡ ಕಾರ್ಯಕ್ರಮ ನಿರೂಪಿಸಿದರು.

ಜಿಲ್ಲೆಯ ಎಲ್ಲ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಸದಸ್ಯರುಗಳು ಪ್ರಶಿಕ್ಷಣ ವರ್ಗದಲ್ಲಿ ಭಾಗಿಯಾಗಿದ್ದರು.

ಅವಧಿ 1 ರಲ್ಲಿ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಅವರು ಪಕ್ಷದ ಇತಿಹಾಸ, ಸಿದ್ಧಾಂತ ಮತ್ತು ಸಮನ್ವಯದ ಬಗ್ಗೆ ಮಾತನಾಡಿದರು. ಅವಧಿ 2 ರಲ್ಲಿ ಮಾಜಿ ಶಾಸಕ ಪಿ. ರಾಜೀವ ಕೇಂದ್ರ ಸರ್ಕಾರದ ಅಂತ್ಯೋದಯ ಯೋಜನೆಗಳು ಮತ್ತು ಅನುಷ್ಠಾನ ಹಾಗೂ ನರೇಂದ್ರ ಮೋದಿ ಅವರ ನಾಯಕತ್ವದ ಬಗ್ಗೆ ಮಾತನಾಡಿದರು. ಅವಧಿ 3 ರಲ್ಲಿ ಸಾಮಾಜಿಕ ಜಾಲತಾಣದ ರಾಜ್ಯ ಸಹ ಸಂಚಾಲಕ ಪ್ರಶಾಂತ ಜಾಧವ ಅವರು ಸಾಮಾಜಿಕ ಜಾಲತಾಣ ಹಾಗೂ ಮಾಧ್ಯಮ ನಿರ್ವಹಣೆ, ಅವಧಿ 4 ರಲ್ಲಿ ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ ಅವರು ಸಾಮಾನ್ಯ ಶಿಷ್ಟಾಚಾರ ಹಾಗೂ ಕುಶಲ ಜನಪ್ರತಿನಿಧಿಗಳ ಬಗ್ಗೆ ಮಾತನಾಡಿದರು.

## ಮದ್ಯ ಸೇವನೆಗೆ ಹಣ ನೀಡಲಿಲ್ಲವೆಂದು ಪತ್ನಿಯನ್ನೇ ಕೊಂದ ಪತಿ



ರಾಯಚೂರು: ಮದ್ಯ ಸೇವಿಸಲು ಹಣ ನೀಡದ ಪತ್ನಿಯನ್ನು ಭೀಕರವಾಗಿ ಪತಿ ಕೊಲೆ ಮಾಡಿರುವ ಘಟನೆ ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಚಿಕ್ಕ ಉಪ್ಪೇರಿ ಗ್ರಾಮದಲ್ಲಿ ನಡೆದಿದೆ.

ಸುನಿತಾ (28) ಪತಿಯ ಕೈಯಿಂದ ಹತ್ಯೆಯಾದ ಗೃಹಿಣಿಯಾಗಿದ್ದು, ಬಸವರಾಜ ಕಂಬಳಿ ಕೊಲೆ ಮಾಡಿರುವ ಪತಿ. ಬಸವರಾಜ ಹಾಗೂ ಸುನಿತಾ ಮನಸಾರೆ ಪರಸ್ಪರ ಪ್ರೀತಿಸಿ 2014ರಲ್ಲಿ ಸಬ್ ರಿಜಿಸ್ಟರ್ ಕಚೇರಿಯಲ್ಲಿ ರಿಜಿಸ್ಟರ್ ವಿವಾಹವಾಗಿದ್ದರು. ಭಾನುವಾರದಂದು ಸಂಜೆ ಸುನಿತಾ ತಮ್ಮ ಹೊಲದಲ್ಲಿ ನೀರು ಕಟ್ಟುತ್ತಿದ್ದರು. ಆಗ ಪತಿ ಬಸವರಾಜ ಹೊಲಕ್ಕೆ ಬಂದು ಮದ್ಯ ಸೇವನೆಗೆ ಹಣವನ್ನು ಕೇಳಿದ್ದಾನೆ.

ಪತ್ನಿ ಹಣ ಕೊಡಲು ನಿರಾಕರಿಸಿದ್ದಾಳೆ. ಆಗ ಅಲ್ಲಿಯೇ ಇದ್ದ ಸಲಿಕೆಯಿಂದ ಬಲಗಣ್ಣಿನ ಭಾಗಕ್ಕೆ ಗಂಭೀರ ಹಲ್ಲೆ ಮಾಡಿದ್ದಾನೆ. ಇದರಿಂದ ತೀವ್ರವಾಗಿ ಗಾಯಗೊಂಡು ರಕ್ತಸ್ರಾವ ಉಂಟಾಗಿ ಸುನಿತಾ ಮೃತಪಟ್ಟಿದ್ದಾರೆ. ಕೊಲೆ ಮಾಡಿದ ಪತಿ ಬಸವರಾಜ ಸ್ಥಳದಿಂದ ಪರಾರಿಯಾಗಿದ್ದು, ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕುಮ್ಮಕ್ಕಿನಿಂದ ಕೊಲೆ-ಆರೋಪ: ಈ ಕೊಲೆ ಮಾಡುವುದಕ್ಕೆ ಬಸವರಾಜನ ತಂದೆ ದೇವಪ್ಪ ಕಂಬಳಿ (ಕೊಲೆಯಾದ ಸುನಿತಾಳ ಮಾವ), ದ್ಯಾಮವ್ವ(ಅತ್ತೆ), ಶಿವಪುತ್ರ(ಬಸವರಾಜ ಅಣ್ಣ) ಕುಮ್ಮಕ್ಕು ನೀಡಿದ್ದಾರೆ ಎಂದು ಮೃತಳ ಸಂಬಂಧಿ ಈರಪ್ಪ ನೀಡಿದ ದೂರಿನ ಮೇರೆಗೆ, ಆರೋಪಿಗಳ ಮೇಲೆ ಐಪಿಸಿ ಕಲಂ 504, 506, 109, 302 ಸಹಿತ 34ರ ಅಡಿಯಲ್ಲಿ ಲಿಂಗಸೂಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ಬೇಂದ್ರೆಯವರ ಮಾತಿನಲ್ಲಿ ಹಾಸ್ಯ ತುಂಬಿರುತ್ತಿತ್ತು: ಗುಂಡೇನಟ್ಟಿ ಮಧುಕರ

ಬೆಳಗಾವಿ: ಬೇಂದ್ರೆಯವರ ಸಾಹಿತ್ಯ ಗಂಭೀರವಾಗಿದ್ದು ಅದು ಓದುಗರಿಗೆ ಕಬ್ಬಿಣದ ಕಡಲೆಯಾದರೆ ಬೇಂದ್ರೆಯವರ ಮಾತಿನಲ್ಲಿ ಹಾಸ್ಯ ತುಂಬಿರುತ್ತಿತ್ತು. ಅವರ ಹಾಸ್ಯ ಮಾತಿಗೆ ಮಾರುಹೋಗದವರೇ ಇಲ್ಲ. ಎಲ್ಲರಿಗೂ ಬೇಂದ್ರೆಯವರರೊಂದಿಗೆ ನಡೆದ ನಗೆಪ್ರಸಂಗಗಳನ್ನು ಹಂಚಿಕೊಳ್ಳುವುದೇ ಒಂದು ಸಂಭ್ರಮ ಎಂದು ಹಾಸ್ಯಕೂಟ ಸಂಚಾಲಕರಾದ ಗುಂಡೇನಟ್ಟಿ ಮಧುಕರ ಇಂದಿಲ್ಲಿ ಹೇಳಿದರು.

ಇದೇ ದಿ 25 ಶನಿವಾರದಂದು ಹಿಂದವಾಡಿಯ ಐ.ಎಂ.ಇ.ಆರ್ ಸಭಾಭವನದಲ್ಲಿ ಜ್ಞಾನಶಾಲೆ ಸೌಹಾರ್ದ ಕೋ ಅಪರೇಟಿವ್ ನಿಯಮಿತ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ "ರಾಜ್ಯೋತ್ಸವ ಹಾಸ್ಯೋತ್ಸವ" ಕಾರ್ಯಕ್ರಮದಲ್ಲಿ ಮಾತನಾಡುತ್ತ ಮೇಲಿನಂತೆ ಹೇಳಿದ ಅವರು ಬೇಂದ್ರೆ, ರಾವಬಹಾದ್ದೂರ, ಚಂಪಾ, ಎಂ.ಎಸ್. ನರಸಿಂಹಮೂರ್ತಿ ಮುಂತಾದವರ ಹಾಸ್ಯಪ್ರಸಂಗಗಳನ್ನು ಹಂಚಿಕೊಳ್ಳುತ್ತ ಜನರನ್ನು ರಂಜಿಸಿದರು.




ಮುಂದೆ ಮಾತನಾಡುತ್ತ ಗುಂಡೇನಟ್ಟಿಯವರು, ಉತ್ತರ ಕರ್ನಾಟಕದ ಭಾಷೆ ಸುಂದರ, ಎಲ್ಲರನ್ನು ತನ್ನೆಡೆಗೆ ಸೆಳೆಯುವ ಶಕ್ತಿ ಈ ಭಾಷೆಯಾಗಿದೆ. ಆದರೆ ಸಾಮಾಜಿಕ ಜಾಲತಾಣಗಳು ಇದೊಂದು ಅಶ್ಲೀಲ ಶಬ್ದಗಳ, ಬೈಗುಳ ಭಾಷೆಯೆಂಬಂತೆ ತೋರಿಸುತ್ತಿರುವುದು ನೋವನ್ನುಂಟು ಮಾಡುತ್ತದೆ ಎಂದು ಹೇಳಿದರು.

ಪ್ರೊ ಜಿ. ಕೆ. ಕುಲಕರ್ಣಿಯವರು ಪತಿ-ಪತ್ನಿ ನಡುವಿನ ನಗೆಪ್ರಸಂಗಗಳನ್ನು ಹೇಳುತ್ತ ಹೋದಂತೆ ಕೇಳುಗರ ನಗೆ, ಮುಗಿಲು ಮುಟ್ಟಿತ್ತು.

ಜಗಳವಾಡದ ಪತಿಪತ್ನಿಯರೇ ಇಲ್ಲ. ಆದರೆ ಆ ಜಗಳ ತಾತ್ಕಾಲಿಕವಾಗಿರಬೇಕು ಮತ್ತೆ ಹೊಂದಿಕೊಂಡು ಹೋಗುವುದೇ ಜೀವನವೆಂದು ಹೇಳಿದರು.

ಕನ್ನಡ ಕೋಟ್ಯಾಧಿಪತಿ ಎಂ. ಬಿ. ಹೊಸಳ್ಳಿಯವರು ಮಾತನಾಡಿದರು. ಜಿ. ಎಸ್. ಸೋನಾರ ಕನ್ನಡ ನಾಡು ನುಡಿ ಕುರಿತಾದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ' 'ಇದೇ ನಾಡು ಇದೇ ಭಾಷೆ..' 'ಈ ಕನ್ನಡ ಮಣ್ಣನು ಮರೆಬೇಡ..' ಮುಂತಾದ ಚಲನಚಿತ್ರ ಗೀತೆಗಳನ್ನು ಹಾಡಿದರು.

ಜ್ಞಾನಶಾಲೆ ಸೌಹಾರ್ದ ಕೋ ಅಪರೇಟಿವ್ ನಿಯಮಿತದ ಅಧ್ಯಕ್ಷರಾದ ಶ್ರೀಧರ ಎನ್.ರಾವ್ ಅವರು ಮಾತನಾಡಿ ತಾಂತ್ರಿಕ, ವೈದ್ಯಕೀಯ ಮುಂತಾದ ಪದವಿ ವಿದ್ಯಾಲಯಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಆಗುತ್ತಿಲ್ಲ.

ಮುಂದುವರೆದ ದೇಶಗಳಾದ ಜಪಾನ, ಜರ್ಮನ್, ಫ್ರಾನ್ಸ ಹಲವಾರು ದೇಶಗಳು ತಮ್ಮ ಮಾತೃ ಭಾಷೆಗಳಲ್ಲಿಯೇ ಶಿಕ್ಷಣ ನೀಡುತ್ತಿವೆ. ಇದು ನಮ್ಮಲ್ಲೇಕೆ ಸಾಧ್ಯವಾಗುತ್ತಿಲ್ಲ.

ತಾಂತ್ರಿಕ, ವೈದ್ಯಕೀಯ ಮುಂತಾದ ಪದವಿಯ ಶಿಕ್ಷಣ ಕನ್ನಡದಲ್ಲಿಯೇ ನೀಡುವಂತಹ ದಿನಗಳು ಬರಲಿ ಎಂದು ಆಶಿಸುತ್ತೇನೆ ಎಂದು ಹೇಳಿದರು. ಸಂಜೀವ ಕೆ. ಮಹಾಜನ ಮಾತನಾಡಿದರು.

ದೀಪ ಬೆಳಗುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸ್ವಾತಿ ಕಿಡದಾಳ ಪ್ರಾರ್ಥಿಸಿದರು. ಅರವಿಂದ ಹುನಗುಂದ ಮತ್ತು ತಾನಾಜಿ ನಿರೂಪಿಸಿದರು.

ಕೇಶವ ತಡಸ, ಗುರುರಾಜ ರೇರ್ಟೇಕರ, ಎಸ್. ಎಂ. ಕುಲಕರ್ಣಿ, ಪ್ರೊ. ಎಂ. ಎಸ್. ಇಂಚಲ, ಡಾ. ಎಚ್. ಬಿ. ರಾಜಶೇಖರ, ಶ್ರೀರಂಗ ಜೋಶಿ, ಶ್ರೀಮತಿ ರುದ್ರಮ್ಮ ಯಾಳಗಿ, ಡಾ. ಸ್ಮಿತಾ ಸುರೇಬಾನ, ಪ್ರಿಯಾ ಪುರಾಣಿಕ, ಮುಂತಾದವರು ಉಪಸ್ಥಿತರಿದ್ದರು.

ಬೆಳಗಾವಿ: ಬೇಂದ್ರೆಯವರ ಸಾಹಿತ್ಯ ಗಂಭೀರವಾಗಿದ್ದು ಅದು ಓದುಗರಿಗೆ ಕಬ್ಬಿಣದ ಕಡಲೆಯಾದರೆ ಬೇಂದ್ರೆಯವರ ಮಾತಿನಲ್ಲಿ ಹಾಸ್ಯ ತುಂಬಿರುತ್ತಿತ್ತು.

ಅವರ ಹಾಸ್ಯ ಮಾತಿಗೆ ಮಾರುಹೋಗದವರೇ ಇಲ್ಲ. ಎಲ್ಲರಿಗೂ ಬೇಂದ್ರೆಯವರರೊಂದಿಗೆ ನಡೆದ ನಗೆಪ್ರಸಂಗಗಳನ್ನು ಹಂಚಿಕೊಳ್ಳುವುದೇ ಒಂದು ಸಂಭ್ರಮ ಎಂದು ಹಾಸ್ಯಕೂಟ ಸಂಚಾಲಕರಾದ ಗುಂಡೇನಟ್ಟಿ ಮಧುಕರ ಇಂದಿಲ್ಲಿ ಹೇಳಿದರು.

## ಲಿಂಗಪೂಜೆಯೆ ಶರಣರಿಗೆ ಸಂಭ್ರಮ: ಮಹಾಂತ ಸ್ವಾಮೀಜಿ



ಬೆಳಗಾವಿ: ಶರಣ ಸಂಪ್ರದಾಯ ಅನುಕರಣೆ ಮಾಡುವವರಿಗೆ ನಿಜವಾದ ಸಡಗರ ಸಂಭ್ರಮ ಯಾವುದಾದರೂ ಇದ್ದರೆ ಅದು ಲಿಂಗಪೂಜೆ, ಜಂಗಮ ದಾಸೋಹ ಮಾತ್ರ. ಸಮಾಜದಲ್ಲಿನ ದುರ್ಬಲರಿಗೆ 'ಉಣಿಸಿ ಉಣ್ಣುವ' ಸಂಸ್ಕೃತಿ ತಿಳಿಸಿಕೊಟ್ಟವರು ಬಸವಾದಿ ಶಿವಶರಣರು.

ಈ ಸಂಸ್ಕೃತಿಯನ್ನು ನೈಜ ಕಾರ್ಯರೂಪಕ್ಕೆ ತಂದವರು ನಾಗನೂರು ರುದ್ರಾಕ್ಷಿ ಮಠದ ಡಾ. ಶಿವಬಸವ ಮಹಾಸ್ವಾಮೀಜಿಯವರು. ಇಂತಹ ಶ್ರೇಷ್ಠ ಪರಂಪರೆಯನ್ನು ಸಮಾಜ ಮುಂದುವರಿಸಬೇಕು ಎಂದು ಮುದುಗಲ್ ಮಾಂತೇಶ್ವರ ಮಠ ಕಲ್ಯಾಣ ಆಶ್ರಮದ ಖ್ಯಾತ ಪ್ರವಚನ ಯೋಗಿ ಮಹಾಂತ ಸ್ವಾಮೀಜಿ ಅಭಿಪ್ರಾಯಪಟ್ಟರು.

ಅವರು ನಗರದ ನಾಗನೂರು ರುದ್ರಾಕ್ಷಿ ಮಠದ ಪ್ರಭುದೇವ ಸಭಾ ಗ್ರಹದಲ್ಲಿ ಕಾಯಕಯೋಗಿ. ಮಹಾಪ್ರಸಾದಿ ಡಾ. ಶಿವಬಸವ ಮಹಾಸ್ವಾಮಿಗಳವರ 134 ನೆಯ ಜಯಂತಿ ಮಹೋತ್ಸವ ನಿಮಿತ್ಯ ಆಯೋಜಿಸಿದ್ದ "ಶರಣರ ಅನುಭವಾಮೃತ ಪ್ರವಚನ" ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಉದ್ದೇಶಿಸಿ ಮಾತನಾಡಿದರು.

ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಮಾತನಾಡಿ, ಬಸವಾದಿ ಶಿವಶರಣರು ನಾಡಿಗೆ ನೀಡಿರುವ ಕಾಯಕ, ದಾಸೋಹ ಅಂತಹ ಮಹಾನ್ ತತ್ವಗಳನ್ನು ಇಂದಿನ ಯುವ ಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ದೃಷ್ಟಿಯಿಂದ ಇಂದಿನಿಂದ ಡಿಸೆಂಬರ್ 4ರ ವರೆಗೆ ಪ್ರತಿದಿನ ಸಂಜೆ 6 ಗಂಟೆಗೆ ಶರಣರ ಅನುಭವಾಮೃತ ಪ್ರವಚನ ಹಮ್ಮಿಕೊಂಡಿದ್ದು ನಾಡಿನ ಜನತೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಿತ್ತೂರು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗಿಂದ್ರ ಮಹಾಸ್ವಾಮಿಗಳು ಮಾತನಾಡಿ, ಶಿವಬಸವ ಸ್ವಾಮೀಜಿಯವರ ಜೀವನವೇ ಒಂದು ಆದರ್ಶ. ಅವರು ನೊಂದವರ ನೋವ ನಿವಾರಿಸಿ, ಅನ್ನ, ಅಕ್ಷರವನ್ನು ನೀಡ ಸಮಾಜವನ್ನು ಮುನ್ನಡೆಸಿದರು. ಅವರ ಸನ್ಮಾರ್ಗದಲ್ಲಿ ನಾವೆಲ್ಲ ನಡೆಯೋಣ ಎಂದರು.

ವೇದಿಕೆಯ ಮೇಲೆ ನಿಚ್ಚನಕಿ ಮಡಿವಾಳೇಶ್ವರ ಮಠದ ಪಂಚಾಕ್ಷರಿ ಮಹಾಸ್ವಾಮಿಗಳು, ಓಂ ಗುರೂಜಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಪ್ರಾಚಾರ್ಯ ಡಾ. ಎ.ಎಲ್. ಪಾಟೀಲ ಸ್ವಾಗತಿಸಿದರು ರಾಜಶೇಖರ ಪಾಟೀಲ ನಿರೂಪಿಸಿದರು. ಕೊನೆಯಲ್ಲಿ ಉಪನ್ಯಾಸಕ ಮಂಜುನಾಥ ಶರಣಪ್ಪನವರ ವಂದಿಸಿದರು.

## ರೇಷ್ಮೆ ಇಲಾಖೆ-ಕೃಷಿ ಇಲಾಖೆ ವಿಲೀನಕ್ಕೂ ಗ್ಯಾರಂಟಿ ಯೋಜನೆಗಳಿಗೂ ಯಾವುದೇ ಸಂಬಂಧವಿಲ್ಲ: ಸಚಿವ ಸತೀಶ್ ಜಾರಕಿಹೊಳಿ



ಬೆಳಗಾವಿ: ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆ ಹತ್ತು ವರ್ಷಗಳ ಹಿಂದೆಯೇ ನಡೆದಿದೆ. ಗ್ಯಾರಂಟಿ ಯೋಜನೆಗಳಿಗೂ ರೇಷ್ಮೆ ಇಲಾಖೆಯನ್ನು ಕೃಷಿ ಇಲಾಖೆಯೊಂದಿಗೆ ವಿಲೀನಕ್ಕೆ ಯಾವುದೇ ಸಂಬಂಧವಿಲ್ಲ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ನಗರದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಉದ್ಯಾನವನ ಬಳಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಎಲ್ಲ ಸರ್ಕಾರಗಳಲ್ಲಿ ಕೆಲ ಇಲಾಖೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ನಡೆದಿದೆ ಎಂದರು.

ಕಾಂತರಾಜು ವರದಿ ಸ್ವೀಕರಿಸಿದರೆ ಕಾಂಗ್ರೆಸ್ ಸರ್ಕಾರಕ್ಕೆ ತೊಂದರೆ ಆಗುತ್ತೆ ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಜಾತಿ ಜನಗಣತಿ ವರದಿಯನ್ನು ಕಾಂತರಾಜು ಅವರು ಸರ್ಕಾರಕ್ಕೆ ನೀಡಬೇಕು. ಅದರ ಪರ-ವಿರೋಧ ಚರ್ಚೆ ನಡೆಯಬೇಕು. ಮುಂದೆ ನೋಡೋಣ. ಅದರ ಬಗ್ಗೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಚರ್ಚೆ ಮಾಡುತ್ತಾರೆ. ಇನ್ನುಡಿಸೆಂಬರ್ 4 ರಿಂದ 15 ರವರೆಗೆ ಬೆಳಗಾವಿಯ ಸುವರ್ಣ ಸೌಧದಲ್ಲಿ ವಿಧಾನಸಭೆಯ ಚಳಿಗಾಲದ ಅಧಿವೇಶನ ನಡೆಯಲಿದ್ದು, ಜಿಲ್ಲಾಡಳಿತ, ನಗರ ಪೊಲೀಸ್ ಇಲಾಖೆ ಎಲ್ಲ ರೀತಿಯ ಸಿದ್ದತೆಗಳನ್ನು ಮಾಡಿದೆ ಎಂದು ತಿಳಿಸಿದರು.

ಖಾಸಗಿ ಕಾರ್ಯಕ್ರಮ, ವೈಯಕ್ತಿಕ ಕೆಲಗಳಿದ್ದವು. ಅದಕ್ಕೆ ವಿದೇಶ ಪ್ರವಾಸಕ್ಕೆ ಹೋಗಿದ್ದೆ, ಶಾಸಕರು, ಮಾಜಿ ಶಾಸಕರು ಯಾರು ನಮ್ಮ ಜತೆ ಬಂದಿಲ್ಲ. ಸಮಯ ಬಂದಾಗ ಶಾಸಕರನ್ನು ದುಬೈಗೆ ಕರೆದುಕೊಂಡು ಹೋಗುತ್ತೇನೆ ಎಂದರು.

## ಶ್ರೀ ಸುರೇಶ ಯಾದವ ಪೌಂಡೇಷನ್ ದಿಂದ ಸ್ವಚ್ಚತಾ ಅಭಿಯಾನಕ್ಕೆ ಚಾಲನೆ



ಬೆಳಗಾವಿ: ನಿರ್ಮಲ ಸಮಾಜ ಆರೋಗ್ಯ ಪೂರ್ಣ ಜೀವನಕ್ಕೆ ದಾರಿಮಾಡಿಕೊಡುತ್ತದೆ. ನಮ್ಮ ಸುತ್ತ ಮುತ್ತಲಿನ ಪರಿಸರ ಸ್ವಚ್ಛವಾಗಿಲು ಪ್ರತಿಯೊಬ್ಬರು ಶ್ರಮಿಸಬೇಕು ಎಂದರು ಶ್ರೀ ಸುರೇಶ ಯಾದವ ಪೌಂಡೇಷನ್ ಅಧ್ಯಕ್ಷ ಸುರೇಶ ಯಾದವ ಹೇಳಿದರು.

ಇಲ್ಲಿನ ರಾಮತೀರ್ಥ ನಗರದ ಶ್ರೀ ಸುರೇಶ ಯಾದವ ಪೌಂಡೇಷನ್ ಹಾಗೂ ರಾಮತೀರ್ಥ ನಗರ ರಹವಾಸಿಗಳ ಸಂಘದ ಸಂಯುಕ್ತ ಆಶ್ರಯದಲ್ಲಿ ಕಣಬರ್ಗಿ ಕೆರೆಯ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾವಂತರು ಹಾಗೂ ಪ್ರಜ್ಞಾವಂತ ನಾಗರೀಕರು ಈ ಸ್ವಚ್ಛತೇ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ. ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಸುಂದರ ಹಾಗೂ ಸ್ವಚ್ಚವಾಗಿಡುವ ಸಂಕಲ್ಪ ಮಾಡಬೇಕು. ಇದು ಸಾಮಾಜಿಕ ಆಂದೋಲನವಾಗಬೇಕು. ಭಾರತದಲ್ಲಿ ಸ್ವಚ್ಛತೆ ಅಭಿಯಾನದ ಮೂಲಕ ಸ್ವಾತಂತ್ರ್ಯ ದ ಹಂಬಲವನ್ನು ಮೂಡಿಸುವುದು ಮಹಾತ್ಮಗಾಂಧೀಜಿಯವರ ಕನಸಾಗಿತ್ತು. ಇಂದು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ನವಭಾರತದ ಕನಸು ನನಸಾಗುತ್ತದೆ ಎಂದರು.

ಸಾಮಾಜಿಕ ಕಳಕಳಿಯಿಂದ ಸುರೇಶ ಯಾದವ ಅವರು ಅವರದೇ ಆದ ಬಳಗವನ್ನು ಕಟ್ಟಿಕೊಂಡು ಪ್ರತಿ ಭಾನುವಾರ ಸುತ್ತಮುತ್ತಲಿನ ಕೆರೆ , ಶಾಲಾ ಮೈದಾನ, ಬಸ್ ನಿಲ್ದಾಣ, ತಮ್ಮ ಸುತ್ತಮುತ್ತಲಿನ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಚತಾ ಅಭಿಯಾನವನ್ನು ನಿರಂತರ ಮಾಡುತ್ತಿದ್ದು, ಸ್ಥಳೀಯ ರಹವಾಸಿಗಳು ಸುರೇಶ ಯಾದವ ಅವರನ್ನು ಕಾರ್ಯಕ್ಕೆ ಅಭಿನಂದಿಸಿದ್ದಾರೆ.

ಸ್ವಚ್ಛತಾ ಅಭಿಯಾನದಲ್ಲಿ ಗುರುಪುತ್ರಪ್ಪ ತೋರಗಲ, ಅಪ್ಪಯ್ಯ ಕೋಲಕಾರ, ಸಿದ್ದರಾಯ ಸಿಗಹಳ್ಳಿ, ಶಂಕರ ಜಿನರಾಳೆ, ಸಂತೋಷ ಮೆರೆಕಾರ, ರಾಜಶೇಖರ ಶಿಂದ್ರೆ,ಮಲ್ಲಾರಿ ದೀಕ್ಷಿತ,ಶಿವಲಿಂಗ ಕಬಡಗಿ, ಅಮರ, ನೀತಿನ ಪಾಟೀಲ, ಸ್ನೇಹಲ ಬೆಳ್ಳಿ, ಡಾ:ರಾಹುಲ, ಕುಮಟಕರ ಸರ, ಶ್ರೀಶೈಲ ಹಿರೇಮಠ, ಅಕ್ಷಯ ಅಂಬಂಡಗಟ್ಟಿ, ಅಭಿಷೇಕ ಅಗಸಗಿ, ಲಂಗೋಟಿ ಸರ ಮುಂತಾದವರು ಪಾಲ್ಗೊಂಡು ಶ್ರಮದಾನ ಮಾಡಿದರು.

## ದೇಶದ ಜನರ ಜೀವನವನ್ನು ಸುಧಾರಿಸುವ ಯೋಜನೆಗಳ ಕನಸು ಬಿತ್ತಿದ್ದೇ ಆಮ್ ಆದ್ಮಿ ಪಾರ್ಟಿ: ಎಎಪಿ ಕರ್ನಾಟಕ ರಾಜ್ಯ ಉಸ್ತುವಾರಿ ದಿಲೀಪ್ ಪಾಂಡೆ

ಬೆಂಗಳೂರು: ದೇಶದ ಜನರ ಜೀವನವನ್ನು ಸುಧಾರಿಸುವ ನಿಟ್ಟಿನಲ್ಲಿ ಹೊಸ ಯೋಜನೆಗಳ ಬಗ್ಗೆ ಮೊದಲು ಚಿಂತಿಸಿದ್ದೇ ಆಮ್ ಆದ್ಮಿ ಪಕ್ಷ, ಆ ಯೋಜನೆಗಳ ಬಗ್ಗೆ ಮೊದಲು ಟೀಕಿಸಿದ್ದ ಪಕ್ಷಗಳು ಇಂದು ಅವುಗಳ ಮೇಲೆಯೇ ಚುನಾವಣೆ ನಡೆಸುತ್ತಿವೆ. ಇಂತಹ ಕ್ರಾಂತಿಕಾರಿ ಯೋಜನೆಗಳ ಮೂಲಕ ಆಮ್ ಆದ್ಮಿ ಪಕ್ಷ ದೇಶದಲ್ಲಿ ಅತಿ ವೇಗವಾಗಿ ಬೆಳೆಯುತ್ತಿದೆ ಎಂದು ದೆಹಲಿ ಶಾಸಕ, ಕರ್ನಾಟಕ ರಾಜ್ಯ ಉಸ್ತುವಾರಿ ದಿಲೀಪ್ ಪಾಂಡೆ ಹೇಳಿದರು

ಆಮ್ ಆದ್ಮಿ ಪಕ್ಷ ಸ್ಥಾಪನೆಯಾಗಿ 11 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಜಯನಗರದ ಎಂಇಎಸ್ ಮೈದಾನದಲ್ಲಿ ಆಯೋಜಿಸಲಾಗಿದ್ದ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದೇಶದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಪಕ್ಷ ಆಮ್ ಆದ್ಮಿ ಪಕ್ಷ, ಕಳೆದ 10 ವರ್ಷದಿಂದ ದೆಹಲಿಯಲ್ಲಿ ಆಮ್ ಆದ್ಮಿ ಪಕ್ಷವನ್ನು ಸೋಲಿಸಲು ಬಿಜೆಪಿ ಪ್ರಯತ್ನಿಸುತ್ತಿದ್ದರೂ, ವಿಫಲವಾಗಿದೆ. ಅಲ್ಲಿನ ಜನ ಅರವಿಂದ ಕೇಜ್ರಿವಾಲ್ ಅವರನ್ನು ನಾಯಕ ಎಂದು ಒಪ್ಪಿಕೊಂಡಿದ್ದಾರೆ. ಜನರ ಜೀವನವನ್ನು ಸುಧಾರಿಸಲು ಆಮ್ ಆದ್ಮಿ ಪಕ್ಷ ಕೆಲಸ ಮಾಡಿದೆ. ವಿದ್ಯುತ್, ಆರೋಗ್ಯ, ಸಾರಿಗೆ, ಶಿಕ್ಷಣದ ಬಗ್ಗೆ ನೀಡಿದ್ದ ಭರವಸೆಗಳನ್ನು ಉತ್ತಮವಾಗಿ ಈಡೇರಿಸಿದೆ. ಆಮ್ ಆದ್ಮಿ ಅಭಿವೃದ್ಧಿಯ ಬಗ್ಗೆ ಪಕ್ಷ ಕಂಡಿದ್ದ ಕನಸನ್ನ ಮೊದಲು ಲೇವಡಿ ಮಾಡಿದ್ದ ಪಕ್ಷಗಳು, ಇಂದು ಅದೇ ಭರವಸೆಗಳ ಮೇಲೆ ಚುನಾವಣೆ ನಡೆಸುತ್ತಿವೆ. ಕರ್ನಾಟಕದಲ್ಲಿ ಕೂಡ ಆಮ್ ಆದ್ಮಿ ಪಕ್ಷಕ್ಕೆ ಉತ್ತಮ ಭವಿಷ್ಯವಿದೆ, ಅದಕ್ಕೆ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಆಮ್ ಆದ್ಮಿ ಪಕ್ಷ ಹುಟ್ಟಿದ್ದು ಬೆಂಗಳೂರಿನಲ್ಲಿ! ಇದು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರಿಗೆಲ್ಲ ಹುಟ್ಟು ಹಬ್ಬದ ದಿನವಾಗಿದೆ. 11 ವರ್ಷದಲ್ಲೇ ಆಮ್ ಆದ್ಮಿ ಪಕ್ಷ ರಾಷ್ಟ್ರೀಯ ಪಕ್ಷವಾಗಿ ಬೆಳೆದಿದೆ. ಇದಕ್ಕೆ ಪಕ್ಷದ ಕಾರ್ಯಕರ್ತರು ಕಾರಣ, ಮೊದಲ




ಚುನಾವಣೆಯಲ್ಲಿ ಸರ್ಕಾರಿ ಟೀಚರ್ ಮಗಳಿಗೆ ಟಿಕೆಟ್ ಕೊಟ್ಟು ಗೆಲ್ಲಿಸಿದ್ದೇವೆ. ಜನ ಸಾಮಾನ್ಯರ ನೋವು, ಸಾಮಾನ್ಯರಿಗೆ ಮಾತ್ರ ಅರ್ಥ ಆಗೋದು ಎಂದು ಎಎಪಿ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿ ರೆಡ್ಡಿ ಹೇಳಿದರು.

ಕರ್ನಾಟಕದಲ್ಲಿ ಹಣ, ಧರ್ಮ ಇಲ್ಲದೆ ರಾಜಕೀಯ ಮಾಡಕ್ಕಾಗಲ್ಲ ಎನ್ನುತ್ತಾರೆ, ಆದರೆ ನಾವು ಇಲ್ಲಿ ರಾಜಕೀಯ ಮಾಡಲು ಬಂದಿಲ್ಲ, ಬದಲಾವಣೆ ಮಾಡಲು ಬಂದಿದ್ದೇವೆ ಎಂದರು. ಆಮ್ ಆದ್ಮಿ ಪಕ್ಷ ಹುಟ್ಟಿದ್ದು ಬೆಂಗಳೂರಿನಲ್ಲೇ, ಅಂದು ನಾಯಕರು ಬೆಂಗಳೂರಿನ ಜಿಂದಾಲ್ ನೇಚರ್ ಕೇರ್ ನಲ್ಲಿ ಪಕ್ಷ ಕಟ್ಟುವ ಬಗ್ಗೆ ಚರ್ಚೆ ನಡೆದಿದ್ದು, ಅರವಿಂದ್ ಕೇಜ್ರಿವಾಲ್, ಜಸ್ಟಿಸ್ ಹೆಗಡೆಯವರು ಚರ್ಚೆ ಮಾಡಿದ್ದರು, ಮೂಲತಃ ಆಮ್ ಆದ್ಮಿ ಪಕ್ಷ ಹುಟ್ಟಿದ್ದು ಬೆಂಗಳೂರಿನಲ್ಲಿ ಎಂದರು. ಕರ್ನಾಟಕದಲ್ಲಿ ಒಂದು ಸ್ಥಾನವನ್ನು ಗೆಲ್ಲದಿದ್ದರೂ ಜನ ಸಾಮಾನ್ಯರಿಗೆ ತೊಂದರೆಯಾದಾಗ ದನಿ ಎತ್ತಿದ್ದು ಆಮ್ ಆದ್ಮಿ ಪಕ್ಷ, ರಾಜ್ಯದಲ್ಲಿ ಶಾಲೆಗಳು, ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂದು ಎಲ್ಲರಿಗೂ ಗೊತ್ತಿದೆ, ಬದಲಾವಣೆ ತರಲು ಕೆಲಸ ಆರಂಭವಾಗಿದೆ ಎಂದರು.

ಕನ್ನಡ ಕೂಡ ರಾಷ್ಟ್ರಭಾಷೆ: ಮುಖ್ಯಮಂತ್ರಿ ಚಂದ್ರು, ಆಮ್ ಆದ್ಮಿ ಪಕ್ಷ ಇಡೀ ದೇಶವನ್ನು ಆವರಿಸಿಕೊಳ್ಳಲಿದೆ, ದೇಶದಲ್ಲಿ ಏಕವ್ಯಕ್ತಿ ಸರ್ಕಾರವನ್ನು ನೋಡಲಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಭದ್ರವಾದ ತಳಪಾಯವನ್ನು ಹಾಕಲಾಗಿದೆ. ನಾವು ಮುನ್ನುಗ್ಗಬೇಕಿದೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷರಾದ ಮುಖ್ಯಮಂತ್ರಿ ಚಂದ್ರು ಹೇಳಿದರು.

ಭಾಷೆ ಎಂದರೆ ಅದು ಬದುಕು, ಕನ್ನಡ ಕೂಡ ರಾಷ್ಟ್ರಭಾಷೆಗಳಲ್ಲಿ ಒಂದು, ಆದರೆ ಹಿಂದಿ ಒಂದನ್ನೇ ರಾಷ್ಟ್ರಭಾಷೆ ಎಂದು ಹೇಳಲಾಗುತ್ತದೆ ಅದು ತಪ್ಪು, ಇಡೀ ಪ್ರಪಂಚದಲ್ಲಿ ರಾಜ್ಯದ ಭಾಷೆಗಾಗಿ ಹೋರಾಟ ಮಾಡುತ್ತಿರುವುದು ಕರ್ನಾಟಕದಲ್ಲಿ ಮಾತ್ರ, ನಮ್ಮ ರಾಜ್ಯದ ಸುತ್ತ 5 ಭಾಷಿಕರ ಹಾವಳಿ ಹೆಚ್ಚಾಗಿದೆ. ಎಲ್ಲಾ ಭಾಷಿಕರ ಹಾವಳಿಯಿಂದ ಕನ್ನಡಿಗರು ಪರಿತಪಿಸುತ್ತಿದ್ದಾರೆ. ಯಾವ ಭಾಷೆಯನ್ನು ದ್ವೇಷ ಮಾಡುವಂತಿಲ್ಲ, ಆದರೆ ಸಂವಿಧಾನದಲ್ಲಿ ಕನ್ನಡವನ್ನು ಒಪ್ಪಿಕೊಂಡಿದೆ, ರಾಜ್ಯದಲ್ಲಿ ಕನ್ನಡ ಅನ್ನದ, ವ್ಯಾವಹಾರಿಕ ಭಾಷೆಯಾಗಬೇಕಿತ್ತು ಆದರೆ ಅದು ಆಗಿಲ್ಲ, ಶಿಕ್ಷಣ, ಆರೋಗ್ಯ, ಉದ್ಯೋಗದಲ್ಲಿ ಕನ್ನಡ ಇರಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಎಎಪಿ ಕರ್ನಾಟಕ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ, ರಾಜ್ಯ ಉಪಾಧ್ಯಕ್ಷರಾದ ಸುರೇಶ್ ರಾಥೋಡ್, ಸಂಘಟನಾ ಕಾರ್ಯದರ್ಶಿ ಬಿ ಟಿ ನಾಗಣ್ಣ, ರಾಜ್ಯ ಸಂವಹನ ಮುಖ್ಯಸ್ಥ ಬ್ರಿಜೇಶ್ ಕಾಳಪ್ಪ. ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಕುಶಲಾ ಸ್ವಾಮಿ ಹಾಗೂ ಪಕ್ಷದ ಅನೇಕ ಪ್ರಮುಖ ನಾಯಕರು, ಕಾರ್ಯಕರ್ತರು ಹಾಗೂ ಬೆಂಬಲಿಗರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಂಪುಟ: 4 ಸಂಚಿಕೆ: 250 ಪುಟ: 4 RNI: KARKAN/2020/79084 Regn,No:G-2/PMG/KA/NK/BM/139/2021-23

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.

Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089